ಮುಂಗಾರು

ಸಂಪಾದಕ: ವಡ್ಡರ್ಸೆ ರಘುರಾಮ ಶೆಟ್ಟಿ

MUNGARU KRNL 46 ಸಂಪುಟ 2 ಸಂಚಿಕೆ 193 | ಮಂಗಳೂರು, ಬುಧವಾರ, ಮಾರ್ಚ್ 26, 1986 | ಬೆಲೆ 80 ಪೈಸೆ (ಮುಂಬೈ : 1-00 ರೂ.) ಪುಟ 8

LATEST NEWS TO FASHION LOVERS OF SURATHKAL

SHRUTHI SELECTIONS

HOTEL SADANAND BUILDING SURATHKAL

FOR TOMORROWS FASHIONABLE READYMADE VISIT TO-DAY

SANIL/NIKY

ಭಾರತಕ್ಕೆ ಎಂಟು ಉಚಿತ ಫ್ರಾನ್ಸ್ ಹೆಲಿಕಾಪ್ಟರ್‌ಗಳು

ಲಂಡನ್, ಮಾ. 25– ಈ ವಾರ ಸು ಬೀಳಲಿರುವ ಒಪ್ಪಂದದ ಪ್ರಕಾರ 27 ಡೌಫಿನ್ ಹೆಲಿಕಾಪ್ಟರುಗಳ ಖರೀದಿಯ ಜೊತೆ ಎಂಟನ್ನು ಉಚಿತವಾಗಿ ಭಾರತಕ್ಕೆ ಫ್ರಾನ್ಸ್ ಒಪ್ಪಿಗೆ ನೀಡಿದೆ ಎಂದು ಫೈನಾನ್ಶಿಯಲ್ ಟೈಮ್ಸ್ ಇಂದು ವರದಿ ಮಾಡಿದೆ.

ಏದು ಕೋಟಿ ರೂಗಳ ಈ ಒಪ್ಪಂದದಲ್ಲಿ ಉಳಿದ 19 ಹೆಲಿಕಾಪ್ಟರ್‌ಗಳ ಅರ್ಧದಷ್ಟು ಬೆಲೆಯನ್ನು 28 ವರ್ಷಗಳ ದೀರ್ಘ ಕಂತುಗಳಲ್ಲಿ ಶೇಕಡಾ 2.5 ಬಡ್ಡಿದರದಲ್ಲಿ ಪಾವತಿಸುವ ಅವಕಾಶವೂ ಒಳಗೊಂಡಿರುತ್ತದೆ. ಈ ಹೆಲಿಕಾಪ್ಟರ್‌ಗಳನ್ನು ಹೊಸದಾಗಿ ರಚಿಸಲಾದ ಭಾರತ ಹೆಲಿಕಾಪ್ಟರ್ ಸಂಸ್ಥೆಯ ಕಾರ್ಯಾಚರಣೆಗೆ ತೊಡಗಿಸಲಿದೆ.



ಅಂಕಪಟ್ಟಿ ಹಗರಣ: ಕೋನಾಗೆ ಛೀಮಾರಿ

ಮುಂಬಯಿ ವಿ. ವಿ. ಸೆನೆಟ್ ನಿರ್ಣಯ

ಮುಂಬಯಿ, ಮಾ. 25- ಅಂಕಪಟ್ಟಿ ಹಗರಣಕ್ಕೆ ಸಂಬಂಧಿಸಿದಂತೆ, ವಿ. ವಿ. ಕಾರ್ಯದಲ್ಲಿ 'ಹಸ್ತಕ್ಷೇಪ ನಡೆಸಲು ಯತ್ನಿಸಿದ್ದಕ್ಕಾಗಿ' ಮಹಾರಾಷ್ಟ್ರದ ರಾಜ್ಯಪಾಲ ಹಾಗೂ ರಾಜ್ಯದ ವಿ.ವಿ.ಗಳ ಕುಲಪತಿ ಕೋನಾ ಪ್ರಭಾಕರ ರಾವ್ ಅವರಿಗೆ, ಮುಂಬಯಿ ವಿ. ವಿ. ಸೆನೆಟ್ ಇಂದು 'ವಾಗ್ದಂಡನೆ' ವಿಧಿಸಿ ಕಲಾಪವನ್ನು ಹತ್ತು ನಿಮಿಷಗಳ ಕಾಲ ಮುಂದೂಡಿತು.

ಕಾರ್ಯಕಾರಿ ಮಂಡಳಿ ಸದಸ್ಯರಾದ ಫೇಬಿಯನ್ ಫರ್ನಾಂಡಿಸ್ ನಿಲುವಳಿ ಸೂಚನೆ ಮಂಡಿಸಿದರು. ರಾಜೇಶ್ ನಿಶಾರ್ ಅನುಮೋದಿಸಿದರು.

ಎರಡು ಗಂಟೆಗಳ ಸುದೀರ್ಘ ಬಿಸಿ ಬಿಸಿ ಚರ್ಚೆಯ ನಂತರ 58-1 ಮತಗಳ ಅಂತರದೊಂದಿಗೆ ಸೆನೆಟ್ ಸೂಚನೆಯನ್ನು ಅಂಗೀಕರಿಸಿತು. ಒಬ್ಬ ಸದಸ್ಯ ಗೈರುಹಾಜರಾದರು.

ಗೊತ್ತುವಳಿಯ ವಿರುದ್ಧ ಮತ ನೀಡಿದ ಏಕೈಕ ಸದಸ್ಯ ನ್ಯಾಷನಲ್ ಸ್ಟೂಡೆಂಟ್ಸ್ ಯೂನಿಯನ್ ಆಫ್ ಇಂಡಿಯಕ್ಕೆ ಸೇರಿದ ಧರ್ಮೇಶ್ ವ್ಯಾಸ್. ಗೈರುಹಾಜರಾದ ವ್ಯಕ್ತಿ ಕುಲಪತಿಯಿಂದ ನೇಮಕವಾದ ಸದಸ್ಯ ಜಿ. ಎಲ್. ಅಭ್ಯಂಕರ್.

ಈ ಹಸ್ತಕ್ಷೇಪದ ಪರಿಣಾಮವಾಗಿ, ವಿಶ್ವವಿದ್ಯಾಲಯದ ಸ್ವಾಯತ್ತತೆ ಹಾಗೂ ವಿಶ್ವಾಸಾರ್ಹತೆಗಳಿಗೆ ಭಂಗ ಬಂದಿದೆ ಎಂದೂ ಸೆನೆಟ್‌ನ ಈ ಗೊತ್ತುವಳಿ ಕಳವಳ ವ್ಯಕ್ತಪಡಿಸಿದೆ.

ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ಶಿವಾಜಿರಾವ್ ಪಾಟೀಲ್ ನಿಲಂಗೇಕರ್ ರಾಜೀನಾಮೆಗೆ ಕಾರಣವಾದ, ಅವರ ಪುತ್ರಿಯ ಅಂಕಪಟ್ಟಿ ಹಗರಣದಲ್ಲಿ ರಾಜ್ಯಪಾಲರ ಪಾತ್ರಕ್ಕೆ ಸಂಬಂಧಿಸಿದಂತೆ ಮುಂಬಯಿ ಹೈಕೋರ್ಟ್ ತೀರ್ಪು ನೀಡುತ್ತಾ ಮಾಡಿದ್ದ ಪ್ರತಿಕೂಲ ಟೀಕೆಗಳ ಹಿನ್ನೆಲೆಯಲ್ಲಿ ಈ ಸೂಚನೆ ಮಂಡಿಸಲಾಗಿತ್ತು.

ರಾಜ್ಯಪಾಲರು ನಂತರ ರಾಜ್ಯದ ಪುಣೆ ಹಾಗೂ ಪರ್ಭಾನಿ ವಿಶ್ವವಿದ್ಯಾಲಯಗಳ ಪದವಿ ಪ್ರದಾನ ಸಮಾರಂಭಗಳಲ್ಲಿ ಭಾಗವಹಿಸಲಿಲ್ಲ.

ಇಂದಿನ ಸೆನೆಟ್ ಸಭೆಯಲ್ಲಿ ಸೆನೆಟ್‌ನ 170 ಸದಸ್ಯರಲ್ಲಿ 60 ಮಂದಿ ಮಾತ್ರ ಹಾಜರಿದ್ದರು.

ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳ ಕುಲಪತಿಯಾದ ರಾಜ್ಯಪಾಲರು, ಕಳೆದ 15 ದಿನಗಳಿಂದ ಅನಾರೋಗ್ಯಕ್ಕೆ ಒಳಗಾಗಿದ್ದು, ಈ ಕಾರಣದಿಂದಾಗಿ ಪುಣೆ ಮತ್ತು ಮರಾಠಾವಾಡ ಕೃಷಿ ವಿಶ್ವವಿದ್ಯಾಲಯಗಳ ಪದವಿಪ್ರದಾನ ಸಮಾರಂಭಗಳಲ್ಲಿ ಪಾಲ್ಗೊಂಡಿರಲಿಲ್ಲ ಎನ್ನಲಾಗಿದೆ.

(ಎರಡನೆ ಪುಟಕ್ಕೆ)

ಬರ: ರಾಜ್ಯಕ್ಕೆ 37 ಕೋಟಿ ರೂ. ಮಂಜೂರು

ಹೊಸದಿಲ್ಲಿ, ಮಾ. 25– ಕರ್ನಾಟಕ ಬರ ಪರಿಹಾರ ಕಾಮಗಾರಿಗಾಗಿ ಕೇಂದ್ರ ಸರಕಾರವು ಇಂದು 37.48 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದೆ.

ರಾಜ್ಯ ಕಂದಾಯ ಸಚಿವ ಎಸ್.ಆರ್. ಬೊಮ್ಮಾಯಿ ಅವರು, ಕೇಂದ್ರ ಹಣಕಾಸು ಸಚಿವ ವಿ.ಪಿ. ಸಿಂಗ್ ಅವರನ್ನು ಇಲ್ಲಿ ಭೇಟಿಯಾಗಿ ಚರ್ಚಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡುತ್ತಾ, ಹಣ ಮಂಜೂರಾತಿಗೆ ಸಂಬಂಧಿಸಿದಂತೆ ಆದೇಶವನ್ನು ನೀಡಲಾಗಿದೆ ಎಂದು ತಿಳಿಸಿದರು.

ಮಂಜೂರಾದ 37.48 ಕೋಟಿ ರೂ.ಗಳ ಪೈಕಿ 7.43 ಕೋಟಿ ರೂ. ಮಾ.31ರ ಅವಧಿಗೆ ಬಿಡುಗಡೆಗೊಳ್ಳುವುದು ಹಾಗೂ ಉಳಿದ 30.05 ಕೋಟಿ ರೂ.ಗಳನ್ನು ಏಪ್ರಿಲ್‌ನಿಂದ ಜೂನ್ ಒಳಗಾಗಿ ಕೇಂದ್ರವು ಬಿಡುಗಡೆಗೊಳಿಸುವುದೆಂದು ಬೊಮ್ಮಾಯಿ ನುಡಿದರು.

ಅರ್ಧ ಡಜನ್ ಹಡೆದಳೀ ಮಾತೆ!

ಮ್ಯೂನಿಕ್ (ಪ. ಜರ್ಮನಿ), ಮಾ. 25– ನಂಬಿದರೆ ನಂಬಿ, ಬಿಟ್ಟರೆ ಬಿಡಿ, ಸುದ್ದಿ ಯೇನೋ ವಿಚಿತ್ರ. ಆದರೆ ಖಂಡಿತ ಸತ್ಯ. ಮಹಿಳೆಯೋರ್ವಳು ಆರು ಮಕ್ಕಳಿಗೆ ಜನ್ಮ ನೀಡಿದ ಆಶ್ಚರ್ಯಕರ ಘಟನೆ ಇಲ್ಲಿನ ಮ್ಯೂನಿಕ್ ವಿ. ವಿ. ಆಸ್ಪತ್ರೆಯೊಂದರಲ್ಲಿ ನಡೆದಿದೆ. ಆದರೆ ಮಕ್ಕಳಿಗೆ ಜನ್ಮ ನೀಡುತ್ತಲೇ ರಕ್ತ ಸಂಚಾರ ಕ್ಷೀಣಿಸಿ ಆಕೆ ಪ್ರಾಣ ಬಿಟ್ಟಳು.

ಹೆತ್ತ ಮಕ್ಕಳಲ್ಲಿ ಮೂರು ಗಂಡು ಹಾಗೂ ಮೂರು ಹೆಣ್ಣು. ಇನ್ನೂ ಆಶ್ಚರ್ಯದ ಸಂಗತಿ ಎಂದರೆ ಈ ಆರೂ ಮಕ್ಕಳು ತೃಪ್ತಿಕರವಾಗಿ ಆರೋಗ್ಯದಿಂದಿವೆ. ಮೊದಲ ಮಗು ... ಜನ್ಮಕ್ಕೆ ಬಂದಿತು ... ತಾಯಿ ಜೀವಂತವಾಗಿ ಉಳಿಯಲಿಲ್ಲ. ಮಕ್ಕಳನ್ನು ಹಡೆದ ಕ್ಷಣದಲ್ಲಿ ರಕ್ತ ಸಂಚಾರ ತೀವ್ರವಾಗಿ ಕ್ಷೀಣಿಸಿದ ಕಾರಣ ಆಕೆ ಅಸುನೀಗಿದಳು.

ಜಪಾನ್ ಚಕ್ರವರ್ತಿ ಅರಮನೆಗೆ ಬಾಂಬ್

ಟೋಕಿಯೋ, ಮಾ. 25- ಜಪಾನ್ ಚಕ್ರವರ್ತಿ ಹಿರೋಹಿಟೋರವರ ಕೇಂದ್ರ ಅರಮನೆ ಕೋಟೆಯಂತಿರುವ ಭವ್ಯ ಅರಮನೆ ಮತ್ತು ನಗರದ ಕೆಳಭಾಗದಲ್ಲಿ ಎತ್ತರದ ಗೋಡೆಗಳಿಂದ ಆವೃತವಾದ ಅಮೆರಿಕ ರಾಯಭಾರ ಇಂದು ಮಧ್ಯಾಹ್ನ ಹೊತ್ತಿಗೆ ಜಪಾನಿನ ಹಮ್ಮಾಸಿ ಕೆಂಪು ಸೈನ್ಯದ ಗೆರಿಲ್ಲಾರ ಕಚ್ಚಾ ಅಗ್ನಿ ಬಾಂಬ್‌ಗಳ ಹೊಡೆತಕ್ಕೆ ಗುರಿಯಾದವು.

ಸಾವುನೋವುಗಳಾಗಲೀ ಯಾವುದೇ ದೊಡ್ಡ ಪ್ರಮಾಣದ ಹಾನಿಯಾಗಲೀ ಈ ದಾಳಿಗಳಿಂದ ಸಂಭವಿಸಿಲ್ಲ.

ಅಮೆರಿಕ ರಾಯಭಾರದ ಆವರಣದೊಳಗೆ ಎರಡು ರಾಕೆಟ್‌ಗಳು ಬಿದ್ದವು. ಸಾರ್ವಭೌಮ ಹಿರೋಹಿಟೋರವರ ನಿವಾಸದತ್ತ ಮೂರು ರಾಕೆಟ್ ಬಾಂಬ್‌ಗಳು ಹಾರಿಸಲ್ಪಟ್ಟವು.

ಇಲ್ಲಿ ರಸ್ತೆ ಬದಿಯಲ್ಲಿ ನಿಲ್ಲಿಸಲಾಗಿದ್ದ ಬಿಳಿ ಬಣ್ಣದ ಮೋಟಾರ್ ಕಾರ್‌ನಿಂದ ಎಸೆಯಲಾಗಿದ್ದ ದೊಡ್ಡ ಶಬ್ದದೊಡನೆ ಉರುಟಾದ ವಸ್ತುಗಳು ಕಾರಿನ ಹಿಂಭಾಗದಲ್ಲಿನ ಬೂಟ್‌ನಿಂದ ಹೊರಗೆ ಜಿಗಿದವು. ಆಬಳಿಕ ಬೂಟ್‌ನೊಳಗಿಂದ ಬೆಂಕಿ ಹೊರಗೆ ಬಂತು ಎಂದು ಅಮೆರಿಕ ರಾಯಭಾರದ ಬಳಿಯ ಸಣ್ಣ ಅಂಗಡಿಯ ಮಾಲೀಕ ಯಸುಕೊ ಮಿಡೊರ ತಿಳಿಸಿದರು.

ಸ್ಫೋಟ ನಡೆದ ಕೂಡಲೇ ರಾಯಭಾರದ ಸಿಬ್ಬಂದಿ ಧಾವಿಸಿ ಅಗ್ನಿಶಾಮಕದ ಮೂಲಕ ಕಾರಿನ ಬೆಂಕಿಯನ್ನು ನಂದಿಸಿದುದಲ್ಲದೆ ಕಚೇರಿಯ ಆವರಣದೊಳಗೆ ಉಂಟಾದ ಜ್ವಾಲೆಯನ್ನೂ ಆರಿಸಿತು.

ದಾಳಿಯ ಎರಡು ಗುರಿಗಳ ಮುಂಭಾಗದಲ್ಲಿ ನಿಲ್ಲಿಸಲಾಗಿದ್ದ ಕಾರಿನ ಬೂಟ್‌ನೊಳಗೆ ಅಡಗಿಸಿಡಲಾಗಿದ್ದ ಕವಣೆಯಂತೆ ಕಾರ್ಯವೆಸಗುವ ಉಕ್ಕಿನ ಕೊಳವೆಯ ಉಪಕರಣಗಳು ದಾಳಿಗೆ ಸಹಾಯಕವಾಗಿದ್ದವು. ಚಕ್ರವರ್ತಿಯ ಅರಮನೆಯ ಮೇಲೆ ನಡೆದ ದಾಳಿ ಪೊಲೀಸ್ ಸ್ಟೇಶನೊಂದರ ಮುಂಭಾಗದಲ್ಲಿ ನಿಲ್ಲಿಸಲಾಗಿದ್ದ ಮೋಟಾರ್‌ಕಾರ್‌ನಿಂದ ನಡೆಯಿತು.

ಅಮೆರಿಕ ರಾಯಭಾರದತ್ತ ಹಾರಿಸಲಾದ ರಾಕೆಟ್‌ಗಳು 24 ಗಂಟೆಗಳಲ್ಲಿ ಪೊಲೀಸ್ ಕಾವಲಿರುವ ಅದರ ಗೇಟಿನ ಎದುರುಗಡೆ ನಿಂತಿದ್ದ ಕಾರ್‌ನಿಂದ ಹೊರಗೆ ಜಿಗಿದವು.

ಏಕಕಾಲದಲ್ಲೇ ನಡೆದ ಈ ದಾಳಿಗಳು ದೂರದಿಂದಲೇ ನಿಯಂತ್ರಿತವಾದವೆಂದು ನಂಬಲಾಗಿದೆ. ಈ ದಾಳಿಗಾಗಿ ಗೆರಿಲ್ಲಾರು ಬಳಸಿದ ಮೋಟಾರ್‌ಕಾರುಗಳೆರಡೂ ಶಹರಿನ ನೆರೆಹೊರೆಯ ಯೊಕೊಹಾಮಾದ ಕಂಗಾವಾ ಎಂಬಲ್ಲಿಂದ ಕದ್ದುದೆಂದು ತಿಳಿದಿದೆ. ಈ ಸಂಬಂಧ ಯಾರನ್ನೂ ಬಂಧಿಸಲಾಗಿಲ್ಲ.

ಮುಂದಿನ ಮೇ ತಿಂಗಳ 4-6 ಅವಧಿಯಲ್ಲಿ ಇಲ್ಲಿ ಜರಗಲಿರುವ ವಿಶ್ವಸಂಸ್ಥೆಯ ಸಹಿತವಾದ ಅಮೆರಿಕ, ಜಪಾನಿನೊಡಗೂಡಿದ ಏಳು ಕೈಗಾರಿಕಾ ಶಕ್ತಿಗಳ ಶೃಂಗ ಸಭೆಯನ್ನು ಅಸ್ತವ್ಯಸ್ತಗೊಳಿಸುವ ಈ ವೊದಲಿನ ಬೆದರಿಕೆಯನ್ನು ಈಡೇರಿಸುವ ಗೆರಿಲ್ಲಾರ ಇಂದು ಮಧ್ಯಾಹ್ನದ ಕೌಶಲ್ಯ ಪೂರ್ಣ ಹಂಚಿಕೆಯು ಟೀಟಲೆ ಶೃಂಗ ಸಭೆಗೆ ಸಜ್ಜಾಗಿರುವ ಶಹರಿನ ಪೊಲೀಸ್‌ಪಡೆಯ ಸಮಸ್ತ ಸ್ಥಳಕ್ಕೆ ಆಕರ್ಷಿಸಲ್ಪಟ್ಟಿತು.

ಅರಮನೆಯಲ್ಲೂ 1 ರಾಯಭಾರದ ಆವರಣದೊಳಗೂ ಕೈಗಳಿಂದ ರಚಿಸಲ್ಪಟ್ಟ ಸುಡುಮದ್ದಿನ ಗಾತ್ರದ ರಾಕೆಟ್‌ಗಳೆಲ್ಲಾ ತನ್ನಿಂತಾನೇ ಪೂರ್ಣ ಸುಟ್ಟುಹೋದವು. ಅವೆ ಅವು ಚಕ್ರವರ್ತಿಯ ವಾಸಸ್ಥಳಕ್ಕೆ ಸಮೀಪಿಸದಿದ್ದರೂ ಅರಮನೆಯ ಆವರಣ ಪ್ರವೇಶಿಸುವಷ್ಟು ದೂರಗಾಮಿ ಶಕ್ತಿಯದ್ದಾಗಿದ್ದು ಅಮೆರಿಕ ರಾಯಭಾರದ ಆವರಣದೊಳಗೆ ರಾಯಭಾರಿಯ ನಿವಾಸಕ್ಕಿಂತ ತುಂಬಾ ದೂರ ಅಪ್ಪಳಿಸಲ್ಪಟ್ಟವು.

(ಎರಡನೆ ಪುಟಕ್ಕೆ)

ನ್ಯಾಯಾಲಯಗಳಲ್ಲಿ ಕಂಪ್ಯೂಟರ್: ಪರಿಶೀಲನೆಯಲ್ಲಿ

ಹೊಸದಿಲ್ಲಿ, ಮಾ. 25– ನ್ಯಾಯಾಧೀಶ ಜಿ. ಎಂ. ಲೋಧಾ ಅವರ ಸಲಹೆಯಂತೆ ಸುಪ್ರೀಂಕೋರ್ಟ್ ಮತ್ತು ಹೈಕೋರ್ಟ್‌ಗಳಲ್ಲಿ ಕಂಪ್ಯೂಟರ್‌ಗಳನ್ನು ಅಳವಡಿಸುವ ಬಗ್ಗೆ ಸರಕಾರ ಆಲೋಚಿಸುತ್ತಿದೆಯೆಂದು ಕೇಂದ್ರದ ಕಾನೂನು ಖಾತೆ ರಾಜ್ಯ ಸಚಿವ ಎಚ್. ಆರ್. ಭಾರದ್ವಾಜ್ ಲೋಕಸಭೆಯಲ್ಲಿಂದು ತಿಳಿಸಿದರು.

ಲಿಖಿತ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಿದ್ದ ಸಚಿವರು, ರಾಜಸ್ಥಾನ ಹೈಕೋರ್ಟಿನ ನ್ಯಾಯಾಧೀಶರಾದ ಲೋಧಾ ನ್ಯಾಯಾಂಗದಲ್ಲಿ ಕಂಪ್ಯೂಟರೀಕರಣದ ಅಳವಡಿಕೆಯ ಬಗ್ಗೆ ಯುರೋಪ್, ಅಮೆರಿಕಾ ಮತ್ತು ಜಪಾನ್ ದೇಶಗಳಲ್ಲಿ ಕಳೆದ ಮೇ ತಿಂಗಳಲ್ಲಿ ಅಧ್ಯಯನ ನಡೆಸಿರುವ ಬಗ್ಗೆ ವರದಿಯೊಂದನ್ನು ಸಲ್ಲಿಸಿದ್ದಾರೆಂದು ತಿಳಿಸಿದರು.

ಸಿಕ್ಖರ ಗಡಿಪಾರು ನಿರ್ಧಾರ ವಾಪಸಿಗೆ ಕೆನಡಾ ನಕಾರ

ಲಂಡನ್, ಮಾ. 25– ಕಾನೂನನ್ನು ಉಲ್ಲಂಘಿಸಿ ವಾಸಿಸುತ್ತಿರುವ, ಹೆಚ್ಚಾಗಿ ಸಿಕ್ಖರೇ ಆಗಿರುವ 2800 ಮಂದಿ ಭಾರತೀಯರನ್ನು ಗಡೀಪಾರು ಮಾಡುವ ನಿರ್ಧಾರವನ್ನು ಹಿಂತೆಗೆದುಕೊಳ್ಳುವಂತೆ ಕೆಲವು ಸಿಕ್ಖ್ ನಾಯಕರು ಮಾಡಿರುವ ಬೇಡಿಕೆಗಳನ್ನು ಕೆನಡಾ ಸರಕಾರವು ತಿರಸ್ಕರಿಸಿದೆ ಎಂದು 'ಟೈಮ್ಸ್' ಪತ್ರಿಕೆಯು ವರದಿ ಮಾಡಿದೆ.

ಸರಕಾರದ ಈ ನಿರ್ಧಾರದಿಂದ ಕೆನಡಾದಲ್ಲಿರುವ ಸಿಕ್ಖರು ಗಾಬರಿಗೊಂಡಿದ್ದು, "ಈ ನಿರ್ಧಾರವನ್ನು ಭಾರತೀಯ ಅಧಿಕಾರಿಗಳೊಂದಿಗೆ ಸೇರಿಕೊಂಡು ಅಥವಾ ದಿಲ್ಲಿಯ ಒಲವು ಸಂಪಾದಿಸಲು ಅಥವಾ ಎರಡೂ ಕಾರಣಗಳಿಗಾಗಿ ಕೈಗೊಳ್ಳಲಾಗಿದೆ" ಎಂದು ಶಂಕಿಸುತ್ತಿದ್ದಾರೆ ಎಂದು ಬರೆದಿರುವ ಪತ್ರಿಕೆಯು "ಇದು ಅಧಿಕೃತ ಕ್ರಮಗಳನ್ನು ಬಿಗಿಗೊಳಿಸುವ ಉದಾಹರಣೆಯಾಗಿದೆ" ಎಂದಿದೆ.

ಕೆನಡಾ ಸರಕಾರದ ಈ ನಿರ್ಧಾರದಿಂದ ಭಾರತೀಯ ಪೊಲೀಸರು ಸಿಕ್ಖ್ ಜನಾಂಗವನ್ನು ಪ್ರಶ್ನಿಸುವ, ಜೈಲಿಗೆ ತಳ್ಳುವ, ಚಿತ್ರಹಿಂಸೆ ನೀಡುವ ಮತ್ತು ಮರಣದಂಡನೆಗೆ ಒಳಪಡಿಸುವಂತಹ ಕ್ರಮಗಳನ್ನು ಕೈಗೊಳ್ಳಲಿದ್ದು ಅದರಿಂದ ಸಿಕ್ಖ್ ಜನಾಂಗವು ಅವಹೇಳನಗೊಳ್ಳಲಿದೆ ಎಂದು ಸಿಕ್ಖ್ ವಕ್ತಾರರು ತಿಳಿಸಿರುವುದಾಗಿ ವರದಿ ತಿಳಿಸಿದೆ.

ಈ ನಿರ್ಧಾರವನ್ನು ಹಿಂತೆಗೆದುಕೊಳ್ಳುವಂತೆ ಸಿಕ್ಖ್ ನಾಯಕರು ಹಲವಾರು ಮನವಿಗಳನ್ನು ಸಲ್ಲಿಸಿದ್ದು, ಅವೆಲ್ಲ ನಿಷ್ಫಲವಾಗಿವೆ. ಈಗ ಸಿಕ್ಖರು ವಕೀಲರೋರ್ವರನ್ನು ಗೊತ್ತು ಪಡಿಸಿದ್ದಾರೆ ಎಂದು ವರದಿ ಹೇಳಿದೆ.

ಕೆನಡಾದಲ್ಲಿ ವಾಸವಾಗಿದ್ದು ರೈಲ್ವೆ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಸಿಕ್ಖ್ ನೌಕರರು ಕಠಿಣ ಹ್ಯಾಟಿನ ಬದಲಾಗಿ ಪೇಟ ಧರಿಸುವುದನ್ನು ನಿಷೇಧಿಸಿ ಇತ್ತೀಚೆಗೆ ಕೆನಡಾದ ಸರ್ವೋಚ್ಚ ನ್ಯಾಯಾಲಯವು ನೀಡಿರುವ ತೀರ್ಪಿನಿಂದಾಗಿ ಕೆನಡಾದ ಸಿಕ್ಖರು ಉದ್ವಿಗ್ನರಾಗಿದ್ದಾರೆ. "ಸಿಕ್ಖರ ಧಾರ್ಮಿಕ ಹಕ್ಕುಗಳನ್ನು ಉಲ್ಲಂಘಿಸಲಾಗಿದೆ. ಸಿಕ್ಖ್ ಜನಾಂಗವನ್ನು ಬೀದಿಗೆಸೆಯಲಾಗಿದೆ." ಎಂದು ಓರ್ವ ಸಿಕ್ಖ್ ನಾಯಕ ಮೊಹಿಂದರ್ ಸಿಂಗ್ ಗೋಪಾಲ್ ಹೇಳಿದ್ದಾರೆ.

ಮದ್ರಾಸಿನಲ್ಲಿ ಸುಪ್ರೀಂ ಕೋರ್ಟ್ ನ್ಯಾಯ ಪೀಠ?

ಮದರಾಸು, ಮಾ. 25– ಮದ್ರಾಸಿನಲ್ಲೊಂದು ಸರ್ವೋಚ್ಚ ನ್ಯಾಯಾಲಯದ ನ್ಯಾಯ ಪೀಠವನ್ನು ಸ್ಥಾಪಿಸುವ ಬಗ್ಗೆ ಕೇಂದ್ರ ಸರಕಾರವು ಪರಿಶೀಲಿಸುತ್ತಿದೆ. ಇದಕ್ಕೆ ಅನುಮತಿ ದೊರಕಿದಲ್ಲಿ ಆದರೆ ಪ್ರಸ್ತುತ ಹೈಕೋರ್ಟ್ ಆವರಣದಲ್ಲಿರುವ ಕಾನೂನು ಕಾಲೇಜನ್ನು ಬೇರೆ ಕಡೆ ಸ್ಥಳಾಂತರಿಸಬೇಕಾಗುತ್ತದೆ ಎಂದು ಶಿಕ್ಷಣ ಸಚಿವ ಸಿ. ಅರಂಗ ನಾಯಗಂ ತಮಿಳುನಾಡು ವಿಧಾನ ಸಭೆಯಲ್ಲಿಂದು ಪ್ರಶ್ನೋತ್ತರ ವೇಳೆಯಲ್ಲಿ ಹೇಳಿದರು.

6,600 ಖೋಟಾ ನೋಟು ಪತ್ತೆ

ಬಿಜಾಪುರ, ಮಾ. 25– ಬಿಜಾಪುರ ಮತ್ತು ರಾಯಚೂರು ಜಿಲ್ಲೆಗಳ ಈರ್ವರಿಂದ 100 ರೂ.ಗಳ 6,600 ಕಳ್ಳ ನೋಟುಗಳನ್ನು ಇತ್ತೀಚೆಗೆ ವಶಪಡಿಸಿಕೊಳ್ಳಲಾಯಿತು.

ಬಿಜಾಪುರ ಜಿಲ್ಲೆಯ ಓರ್ವನಿಂದ 6,600 ಖೋಟಾ ನೋಟುಗಳನ್ನು ವಶಪಡಿಸಿಕೊಳ್ಳಲಾಯಿತು. ಆತನು ನೀಡಿದ ಮಾಹಿತಿಯಂತೆ ರಾಯಚೂರು ಜಿಲ್ಲೆಯ ಇನ್ನೋರ್ವನ ಮನೆಯ ಮೇಲೆ ದಾಳಿ ನಡೆಸಿ ರೂ. ನೂರರ ಎರಡು ಕಳ್ಳನೋಟುಗಳನ್ನು ವಶಪಡಿಸಿಕೊಳ್ಳಲಾಯಿತು ಎಂದು ಪೊಲೀಸರು ತಿಳಿಸಿದರು. ಅವರೀರ್ವರನ್ನು ಬಂಧಿಸಲಾಗಿದೆ.

ಲಿಬಿಯಾ ಕ್ಷಿಪಣಿ ನೆಲೆಗೆ ಅಮೆರಿಕ ವಿಮಾನ ದಾಳಿ

ವಾಷಿಂಗ್ಟನ್, ಮಾ. 25– ಲಿಬಿಯಾದ ಕಾವಲು ದೋಣಿ ಮತ್ತು ಕ್ಷಿಪಣಿ ನೆಲೆಗಳ ಮೇಲೆ ಅಮೆರಿಕದ ನೌಕಾದಳದ ಜೆಟ್ ... ಎಂದು ಶ್ವೇತಭವನ ಪ್ರಕಟಿಸಿದೆ.

ಸಿರ್ಟೆ ಕೊಲ್ಲಿಯ 'ಮೃತ್ಯುರೇಖೆ' ಎಂದು ಕರೆಯಲ್ಪಡುವ ಸ್ಥಳದ ಸಮೀಪ ನಡೆದ ಕವಾಯತೊಂದರ ಸಮಯದಲ್ಲಿ ಅಮೆರಿಕದ ವಿಮಾನವೊಂದರ ಮೇಲೆ ಲಿಬಿಯಾವು ... ದ ದಾಳಿಗೆ ಪ್ರತೀಕಾರವಾಗಿ ... ದ್ದೆಂದು ಹೇಳುತ್ತಿರುವ ಕೊಲ್ಲಿ ಪ್ರದೇಶದಲ್ಲಿ ಶಾಂತಿಯುತ ಕಾರ್ಯಾಚರಣೆಗಳನ್ನು ನಡೆಸುತ್ತಿದ್ದ ಅಮೆರಿಕದ ಸೇನಾದಳಗಳ ಮೇಲೆ ಲಿಬಿಯಾವು ಆರು ಕ್ಷಿಪಣಿಗಳನ್ನು ಪ್ರಯೋಗಿಸಿತು ಎಂದು ಅಧ್ಯಕ್ಷೀಯ ವಕ್ತಾರ ಲ್ಯಾರಿ ಸ್ಪೀಕ್ಸ್ ಹೇಳಿದರು.

ಅಮೆರಿಕದ ಕಡೆಯಲ್ಲಿ ... ಸಾವು ನೋವುಗಳು ಸಂಭವಿಸಿಲ್ಲ ... ಲ್ ಸಲೆಯಲ್ಲಿ ಆಗಿರಬಹುದಾದ ... ಬಗ್ಗೆ ತಾನು ಅಂದಾಜು ಮಾಡಿಲ್ಲ ... ತಿಳಿಸಿದ ಅವರು ಅಮೆರಿಕದ ... ವಿಮಾನಗಳನ್ನು ಗುಂಡಿಕ್ಕಿ ಉರುಳಿಸಲಾಗಿದೆ ಎಂಬ ಲಿಬಿಯಾದ ಟಿ. ವಿ. ವರದಿಗಳನ್ನು ನಿರಾಕರಿಸಿದರು.

ತರನ್‌ತಾರನ್: ದುಷ್ಕರ್ಮಿ ಗುಂಡಿಗೆ ಇಬ್ಬರು ಬಲಿ

ಚಂಡೀಗಢ, ಮಾ. 25– ಅಮೃತಸರ ಜಿಲ್ಲೆಯ ತರನ್‌ತಾರನ್ ಸಮೀಪ ಉಗ್ರಗಾಮಿಗಳು ಇಂದು ರಾತ್ರಿ ಈರ್ವರನ್ನು ಗುಂಡಿಟ್ಟು ಕೊಂದರು ಎಂದು ಅಧಿಕೃತ ವರದಿಗಳು ತಿಳಿಸಿವೆ.

ನಾಲ್ಕು ಮಂದಿ ದುಷ್ಕರ್ಮಿಗಳು ಅಂಗಡಿಯೊಂದರತ್ತ ಗುಂಡು ಹಾರಿಸಿದಾಗ ಅಂಗಡಿಯಲ್ಲಿದ್ದ ಈರ್ವರು ಸ್ಥಳದಲ್ಲೇ ಮೃತಪಟ್ಟರು. ದುಷ್ಕರ್ಮಿಗಳು ಟ್ರಕ್ಕೊಂದರಲ್ಲಿ ಪರಾರಿಯಾದರು.

ಮಜಾರಿಪುರ ಪಟ್ಟಣದಲ್ಲಿ ಶಾಲೆ ಮತ್ತು ಬಸ್ಸೊಂದನ್ನು ದುಷ್ಕರ್ಮಿಗಳು ಸುಟ್ಟುಹಾಕಿ ಅಲ್ಲಿ ಕರ್ಫ್ಯೂ ಹೇರಲಾಯಿತು. ಗುರುದಾಸಪುರದ ರಸ್ತೆಯೊಂದರಲ್ಲಿ ಬಿದ್ದಿದ್ದ ಬಾಂಬ್ ಒಂದನ್ನು ಸೈನ್ಯದ ಅಧಿಕಾರಿಗಳು ನಿಷ್ಕ್ರಿಯಗೊಳಿಸಿದರು.

ಮುಷ್ಕರ: ಕಂದಾಯ ನೌಕರರ ಬಿಗಿಪಟ್ಟು

ಬೆಂಗಳೂರು, ಮಾ. 25– ಮಾರ್ಚ್ 27ರ ಒಳಗಾಗಿ ಚಳವಳಿ ಹಿಂತೆಗೆದುಕೊಳ್ಳುವಂತೆ, ಚಳವಳಿ ನಿರತ ನೌಕರರಿಗೆ ನಿನ್ನೆ ಸರಕಾರ ಎರಡನೇ ಎಚ್ಚರಿಕೆ ನೀಡಿದ್ದನ್ನು ಕರ್ನಾಟಕ ಕಂದಾಯ ಇಲಾಖೆ ನೌಕರರ ಸಂಘ 'ತುಂಬ ವಿಚಿತ್ರ' ಎಂದು ಬಣ್ಣಿಸಿದೆ.

ನೌಕರರ ಸಮಸ್ಯೆ ಪರಿಹರಿಸುವ ಬದಲು ಇಂತಹ ಹೇಳಿಕೆಗಳನ್ನು ನೀಡುವ ಮೂಲಕ ಸರಕಾರ ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸುತ್ತಿದೆ ಎಂದು ಸಂಘ ಪತ್ರಿಕಾ ಹೇಳಿಕೆಯೊಂದರಲ್ಲಿ ತಿಳಿಸಿದೆ.

'ಇಂತಹ ಬೆದರಿಕೆಗಳಿಗೆ ಕಂದಾಯ ನೌಕರರು ಬೆದರುವುದಿಲ್ಲ' ಎಂದು ತಿಳಿಸಿದ ಹೇಳಿಕೆ ನೌಕರರ ಶಕ್ತಿಯನ್ನು ಮುರಿಯುವ ಸರಕಾರದ ತಂತ್ರಗಳು ಫಲಕಾರಿ ಆಗುವುದಿಲ್ಲ ಎಂದು ಹೇಳಿದೆ.

ಪ್ರಸ್ತಾಪಿತ ಮಂಡಲ ಪಂಚಾಯತ್‌ಗಳಲ್ಲಿ ಕಾರ್ಯದರ್ಶಿಗಳ ಹುದ್ದೆಗಳಿಗೆ ಕಂದಾಯ ಸಿಬ್ಬಂದಿ ನೇಮಕಾತಿಯೂ ಸೇರಿದಂತೆ ಎಲ್ಲ ಬೇಡಿಕೆಗಳು ಈಡೇರುವವರೆಗೂ ಅನಿರ್ದಿಷ್ಟ ಅವಧಿಯ ಮುಷ್ಕರ ಮುಂದುವರಿಯುವುದುಎಂದು ಸಂಘಸ್ಪಷ್ಟಪಡಿಸಿದೆ.



ದ. ಕ. ಜನತಾ: ಬಹಿರಂಗಕ್ಕೆ ಬಂದ ಬಣಗಳ ಜಗಳ

ಮಂಗಳೂರು ಮಾ. 25–

ದಕ್ಷಿಣ ಕನ್ನಡ ಜಿಲ್ಲಾ ಜನತಾ ಪಕ್ಷದಲ್ಲಿ ಈವರೆಗೆ ಅಸ್ಪಷ್ಟವಾಗಿದ್ದ ಬಿರುಕು ಇದೀಗ ಸಾರ್ವಜನಿಕ ಚುನಾವಣೆಯಿಂದಾಗಿ ಸ್ಪಷ್ಟವಾಗುತ್ತಿದ್ದು ಉಭಯ ಬಣಗಳಲ್ಲಿ ತೆರೆಯ ಮರೆಯಲ್ಲಿದ್ದ ಮುಖಗಳು ನಿಧಾನವಾಗಿ ಅನಾವರಣಗೊಳ್ಳುತ್ತಿವೆ.

ದಕ್ಷಿಣ ಕನ್ನಡದಲ್ಲಿ ಒಂದು ವರ್ಗದ ಪಕ್ಷವೆಂದೇ ಹಣೆಪಟ್ಟಿ ಕಟ್ಟಿಸಿಕೊಳ್ಳುತ್ತಿರುವ ಜನತಾ ಪಕ್ಷದಲ್ಲಿ ಕಳೆದ ವಿಧಾನ ಸಭಾ ಚುನಾವಣೆ ನಡೆಯುವ ವರೆಗೆ ಎಲ್ಲವೂ ಸರಿಯಾಗಿತ್ತು. ಪಕ್ಷ ಅಧಿಕಾರದಲ್ಲಿ ಭದ್ರಗೊಳ್ಳುತ್ತಿದ್ದಂತೆ ಸ್ವಾರ್ಥದಿಂದ ಪಕ್ಷ ಕಟ್ಟಲು ಪ್ರಯತ್ನಿಸುತ್ತಿದ್ದ ಇಲ್ಲಿನ ನಾಯಕರಲ್ಲಿ ನಿಧಾನವಾಗಿ ಸ್ವಾರ್ಥ-ಮಾತ್ಸರ್ಯದ ಬೀಜ ಮೊಳಕೆ ಒಡೆಯತೊಡಗಿದವು.

ಕಳೆದ ವಿಧಾನಸಭಾ ಚುನಾವಣೆಯ ನಂತರ ಜಿಲ್ಲಾ ಜನತಾ ಪಕ್ಷದ ಅಧ್ಯಕ್ಷರಾದ ರಾಮಯ್ಯ ನಾಯ್ಕ ಮತ್ತು ಶಾಸಕ ಅಮರನಾಥ ಶೆಟ್ಟಿ ಅವರ ನಡುವಿನ ಭಿನ್ನಾಭಿಪ್ರಾಯ ಹೊಗೆಯಾಡತೊಡಗಿತು. ಈ ಬೆಳವಣಿಗೆಯ ಜತೆಯಲ್ಲಿ ಜಿಲ್ಲೆಯ ಕಾರ್ಯಕರ್ತರು ಕೂಡ ಉಭಯ ಬಣಗಳಲ್ಲಿ ಹಂಚಿಹೋದರು.

ಅಧ್ಯಕ್ಷ ಮತ್ತು ಶಾಸಕರ ನಡುವಿನ ವಿರಸಕ್ಕೆ ಪಕ್ಷದ ಮೂಲಗಳು ಹಲವಾರು ಕಾರಣಗಳನ್ನು ಮುಂದಿಡುತ್ತಿದ್ದು, ಎಲ್ಲರ ಪ್ರಕಾರ ಇದರ ಮೂಲ ಚುನಾವಣೆ ಫಂಡ್. 1983ರ ಚುನಾವಣೆಯಲ್ಲಿ ಬಡಕಲಾಗಿದ್ದ ಪಕ್ಷ 85ರ ಚುನಾವಣೆಯಲ್ಲಿ ಬಲಿಷ್ಠವಾಗಿ ಶ್ರೀಮಂತರ ಒಲವುಗಳಿಸಿತು.

ಚುನಾವಣೆ ಸಮಯದಲ್ಲಿ ಫಂಡ್ ಕಲೆಕ್ಷನ್ ಹೊಣೆಹೊತ್ತ ಜೀವರಾಜ ಆಳ್ವ ಅವರು ಮಂಗಳೂರಿಗೆ ಬಂದು ಸಂಗ್ರಹಿಸಿದ್ದ ನಿಧಿಯ ಅಂಶವನ್ನು ನೇರವಾಗಿ ಶಾಸಕರಿಗೆ ನೀಡಿದ್ದು ಈ ವ್ಯವಹಾರದಲ್ಲಿ ಅಧ್ಯಕ್ಷ ರಾಮಯ್ಯ ನಾಯ್ಕ ಅವರು ಮರೆಯಲ್ಲಿಯೇ ಉಳಿದಿದ್ದರು. ಚುನಾವಣೆ ನಡೆಸಲು ಹಣಕ್ಕಾಗಿ ಪರದಾಡುತ್ತಿದ್ದ ರಾಮಯ್ಯ ನಾಯ್ಕರು ಅಸಹಾಯಕರಾಗಿ ಜಿಲ್ಲೆಗೆ ಆಗಮಿಸಿದ ಮುಖ್ಯಮಂತ್ರಿಯವರಿಗೆ ಶಾಸಕರ ವಿರುದ್ಧ ದೂರು ನೀಡಿದ್ದರೆನ್ನಲಾಗಿದ್ದು, ನಾಯ್ಕರ ಈ ನೇರ ನಡವಳಿಕೆಯೇ ಶಾಸಕರ ಅಸಮಾಧಾನದ ಮೂಲವೆನ್ನಲಾಗಿದೆ. ಶಾಸಕರ ಬಗ್ಗೆ ಮುಖ್ಯಮಂತ್ರಿಗಳೊಡನೆ ಅಧ್ಯಕ್ಷರು ಹೇಳಿದ ಮಾತುಗಳಿಂದಾಗಿಯೇ ಜಿಲ್ಲೆಯ ಏಕೈಕ ಜನತಾ ಶಾಸಕರೆಂಬ ಖ್ಯಾತಿಯ ಹೊರತಾಗಿಯೇ ಅಮರನಾಥ ಶೆಟ್ಟಿಯವರು ಸಚಿವ ಪದವಿಯಿಂದ ವಂಚಿತರಾದರೆಂಬ ಅಭಿಪ್ರಾಯವಿದೆ.

ಅಂದಿನಿಂದಲೇ ಅಧ್ಯಕ್ಷ ಮತ್ತು ಶಾಸಕರ ನಡುವೆ ಮುಸುಕಿನೊಳಗಿನ ಗುದ್ದಾಟ ಪ್ರಾರಂಭವಾಗಿದ್ದು, ಮಂಗಳೂರಿನ ಜನತಾ ಪಕ್ಷದ ಜಿಲ್ಲಾ ಕಚೇರಿಯಲ್ಲಿ ಅಧ್ಯಕ್ಷರ ಗುಂಪು ಮಾತ್ರ ಕಾರುಬಾರು ನಡೆಸುತ್ತಿದ್ದು ಶಾಸಕರ ಗುಂಪು ದೂರವೇ ಉಳಿದಿತ್ತು.

ರಾಮಯ್ಯ ನಾಯ್ಕರ ಗುಂಪಿನಲ್ಲಿ ಶಂಕರ ರೈ, ಬಾಲಕೃಷ್ಣ ಪೂಂಜ, ಪದ್ಮನಾಭ ಶೆಟ್ಟಿ, ಮೋಹನದಾಸ ಹೆಗ್ಡೆ ಮತ್ತು ರಹೀಂ ಅವರು ಪ್ರಮುಖರು. ಶಾಸಕ ಅಮರನಾಥ ಶೆಟ್ಟಿಯವರ ಬಣದಲ್ಲಿ, ಅಪ್ಪಣ್ಣ ಹೆಗ್ಡೆ, ಎಂ. ಸಂಜೀವ, ದಯಾನಾಥ ಕೋಟ್ಯಾನ್, ಮಹಮ್ಮದ್ ಹುಸೇನ್, ನೊರೋನ್ಹಾ ಮೊದಲಾದವರಿದ್ದು, ಎರಡು ಬಣಗಳಲ್ಲಿ ಕಾಲಿಟ್ಟಿದ್ದ ಲೋಕಯ್ಯ ಶೆಟ್ಟಿಯವರು ಇದೀಗ ನಾಯ್ಕರ ಗುಂಪಿನಿಂದ ಕಳಚಿಕೊಂಡು ಶಾಸಕರ ಜತೆಯಲ್ಲಿಯೇ ಇದ್ದಾರೆ.

ಮೇರೆನ್ನೋಟಕ್ಕೆ ಅಧ್ಯಕ್ಷರ ಗುಂಪು ಪಾಠ ಕಲಿತಂತೆ, ಶಾಸಕರ ಗುಂಪು ಜಾತ್ಯಾತೀತ ಕೂಟದಂತೆ ಕಾಣುತ್ತಿದ್ದು, ಎರಡನೇ ಗುಂಪು ಈ ಅಂಶವನ್ನೇ ತಮ್ಮ ದಾಳಿಯ ಅಸ್ತ್ರವನ್ನಾಗಿ ಮಾಡಿಕೊಂಡಿದೆ. ಪಕ್ಷದ ರಾಜ್ಯ ಅಧ್ಯಕ್ಷರಾದ ಚಂದ್ರಶೇಖರ್ ಅವರ ಜತೆಯಲ್ಲಿ ನಡೆದ ಸಭೆಯೊಂದರಲ್ಲಿ ಈ ವಿಚಾರ ಚರ್ಚೆಗೆ ಬಂದು ಅಂತಿಮವಾಗಿ ಎಂ. ಸಂಜೀವ, ದಯಾನಾಥ ಕೋಟ್ಯಾನ್, ನೊರೋನ್ಹಾ ಮೊದಲಾದವರಿಗೆ ಪಕ್ಷದಲ್ಲಿ ಸ್ಥಾನ ನೀಡಲಾಯಿತೆಂದು ಹೇಳಲಾಗಿದೆ.

ರಾಜ್ಯದ ಪ್ರಭಾವಿ ನಾಯಕ ಮತ್ತು ಹೆಗಡೆಯ ಒಳವಲಯದ ಸಂಗಾತಿ ಜೀವರಾಜ ಆಳ್ವರ ಆಶೀರ್ವಾದ ಶಾಸಕ ಗುಂಪಿನ ಮೇಲಿರುವುದು ಅಧ್ಯಕ್ಷರ ಗುಂಪಿನ ದೊಡ್ಡ ತಲೆನೋವು. ಅಧ್ಯಕ್ಷ...

(ಎರಡನೆ ಪುಟಕ್ಕೆ)

ಬೆತ್ತಲೆ ಸೇವೆ ಹಿಂಸಾಕಾಂಡ:

ಸಾವಿನ ಸುಳಿಯಿಂದ ಕೊನೆಗೂ ಪಾರು

(ನಿನ್ನೆಯ ಸಂಚಿಕೆಯಿಂದ)

ಪೊಲೀಸ್ ವ್ಯಾನ್‌ನ ಹಿಂಬದಿಯ ಬಾಗಿಲು ಮುರಿದು ಬಿದ್ದ ಒಡನೆ ವ್ಯಾನಿನ ಒಳಗೆ ಹೃದಯವಿದ್ರಾವಕ ಹಾಹಾಕಾರ, ರೋಧನಗಳು ಮೇರೆ ಮೀರಿತು. ಬಾಗಿಲ ಬಳಿ ಇದ್ದ ನಾಲ್ವರು ಪೊಲೀಸರನ್ನು ಹೊರಗೆ ಎಳೆದು ಹಾಕಿ ಅವರನ್ನು ಸುತ್ತ ನೆರೆದ ಬೆತ್ತಲೆ ದಾಂಧಲೆಕೋರರು ಚೆನ್ನಾಗಿ ಥಳಿಸುತ್ತಾ, ಅವರ ಸಮವಸ್ತ್ರಗಳನ್ನು ಹರಿದು ಎಸೆಯತೊಡಗಿದರು.

ಒಳನುಗ್ಗಿದ ಇನ್ನಿಬ್ಬರು ಲುಂಗಿ ಸುತ್ತಿಕೊಂಡಿದ್ದು ಗೂಂಡಾಗಳಂತಿದ್ದವರು ಮಹಿಳಾ ಪೊಲೀಸರೊಬ್ಬರನ್ನು ಸಮ್ಮ ಮೇಲಿನಿಂದಲೇ ದರದರನೆ ಎಳೆದು ಹೊರಹಾಕಿದರು. ಉಳಿದವರು ಆವೇಶ ಬಂದವರಂತೆ ನರ್ತಿಸುತ್ತಾ, ಆ ಮಹಿಳಾ ಪೊಲೀಸಳ ಯಾವುದೇ ಆರ್ತನಾದವನ್ನೂ ಗಣನೆಗೆ ತೆಗೆದುಕೊಳ್ಳದೆ ನಮ್ಮ ಕಣ್ಣೆದುರಿನಲ್ಲಿ ಅವರು ತೊಟ್ಟಿದ್ದ ಕುಪ್ಪಸ, ಸೀರೆ, ಒಳ ಅಂಗಿಗಳನ್ನೆಲ್ಲಾ ಕಿತ್ತುಹಾಕಿ ಹರಿದು ಎಸೆಯತೊಡಗಿದರು.

ಅಷ್ಟರಲ್ಲಿ ಒಳನುಗ್ಗಿದ ಮೂವರು ದಷ್ಟಪುಷ್ಟವಾಗಿದ್ದ ಬೆತ್ತಲೆ ಹೆಣ್ಣುಗಳು ವ್ಯಾನಿನ ಒಳಗೆ ವಿಚಿತ್ರವಾಗಿ ಕುಣಿಯುತ್ತಾ, ತಮ್ಮನ್ನೆಲ್ಲಾ ತ್ರಿಶೂಲಗಳಿಂದ ಚುಚ್ಚುತ್ತಾ ಕಾಲಿನಿಂದ ಒದೆಯತೊಡಗಿದರು. ಅವರೊಡನೆ ನುಗ್ಗಿದ ಇನ್ನೊಬ್ಬ ದಾಂಡಿಗ ನನ್ನ ಪಕ್ಕದಲ್ಲೇ ಮುದುರಿಕುಳಿತಿದ್ದ ಮಹಿಳೆಯೊಬ್ಬರ ಕುಪ್ಪಸವನ್ನು ಹರಿದು ಕೊರಳ

ಲ್ಲಿದ್ದ ಚಿನ್ನದ ಸರವನ್ನು ಎಳೆದ. ಅದು ತುಂಡಾಯಿತಾದರೂ ಅವನ ಕೈಯಿಂದ ತಪ್ಪಿ ಆ ಮಹಿಳೆಯ ಮೇಲೆಯೇ ಬಿತ್ತು.

ಒಡನೆಯೇ ಆ ಮಹಿಳೆ ಆ ಸರವನ್ನು ಪಕ್ಕದಲ್ಲಿದ್ದ ನನ್ನ ಕೈಗೆ ನೀಡಿದರು. ಆಗ ಆ ದಾಂಡಿಗ ಮತ್ತು ಬೆತ್ತಲೆಯಿದ್ದ ಹೆಣ್ಣೊಬ್ಬಳ ದೃಷ್ಟಿ ನನ್ನ ಮೇಲೆ ಬಿತ್ತು. ತಕ್ಷಣ ನಾನು ಆ ಸರವನ್ನು ನನ್ನ ಹಿಂದೆ ಇದ್ದ ವಿಶೇಷ ತಹಸೀಲ್ದಾರ್ ರುದ್ರಪ್ಪನವರ ಮಡಿಲಿಗೆ ಎಸೆದೆ. ಆ ದಾಂಡಿಗ ಅವರ ಮೇಲೆ ಬಿದ್ದ. ಆ ಸರ ಮಕ್ಕಳಿಲ್ಲೋ ಹಾರಿದ ನೆನಪು. ರುದ್ರಪ್ಪನವರು ಧರಿಸಿದ್ದ ಕನ್ನಡಕ ಪುಡಿಪುಡಿಯಾಯಿತು.

ಪರಶುರಾಮ ತನ್ನ ಮೈಮೇಲೆ ಬಂದಿದೆ ಎಂದು ಕುಣಿಯುತ್ತಿದ್ದ ಗೂಂಡಾನಂತಿದ್ದ ವ್ಯಕ್ತಿ ಕಬ್ಬಿಣದ ಸಲಾಕೆ ಹಿಡಿದು ಒಳನುಗ್ಗಿದ. ಎಲ್ಲರನ್ನೂ ತದಕ ತೊಡಗಿದ.

ವರದಿ: ಪಿ.ಜೆ. ವಿಜು ಪೂಣಚ್ಚ

ನಂತರ ಹೊರಗೆ ತಲೆಹಾಕಿ "ಅವನು ಇಲ್ಲಿಲ್ಲ ಕಣೋ", ಎನ್ನುತ್ತಾ ನಮ್ಮೊಡನಿದ್ದ ಒಬ್ಬನ ಷರ್ಟನ್ನೂ ಕಿತ್ತುಕೊಂಡು ಕಂಕುಳಲ್ಲಿ ಸಿಕ್ಕಿಸಿಕೊಂಡು ಹೊರ ನಡೆದ. ಅವನು ಮಾತನಾಡಿದ ಧಾಟಿ ಗ್ರಾಮ್ಯವಾಗಿರದೆ, ಸ್ವಚ್ಛ ಕನ್ನಡವಾಗಿತ್ತು. ಅವನು ಕೊಲೆಮಾಡಲಿಕ್ಕಾಗಿಯೇ ಯಾರನ್ನೋ ಹುಡುಕುತ್ತಿರುವಂತಿತ್ತು.

ಇನ್ನೊಬ್ಬ ಬೆತ್ತಲೆದಾಂಡಿಗ ನನ್ನ ಪಕ್ಕದಲ್ಲೇ ಇದ್ದ ಮಧ್ಯವಯಸ್ಕಿನ ಮಹಿಳೆಯೊಬ್ಬರನ್ನು ನಮ್ಮ ಕಣ್ಣೆದುರಿನಲ್ಲೇ ಸೀರೆ ಕುಪ್ಪಸಗಳನ್ನು ಹರಿದು ಸೀರೆಯ ತುದಿಯನ್ನು ಹಿಡಿದು ಹೊರಗೆಳೆದ ಆ ಮಹಿಳೆ ರಸ್ತೆಗೆಬಿದ್ದು ಮುದುರಿಕೊಂಡರು.

ಇದೆಲ್ಲದರ ನಡುವೆ ವ್ಯಾನಿನ ಒಳನುಗ್ಗಿದ್ದ ಇಬ್ಬರು ದಾಂಡಿಗರು ನಮ್ಮ ಮೇಲೆ ಹಲ್ಲೆ ನಡೆಸುತ್ತಾ, ನಮ್ಮ ಕುತ್ತಿಗೆ ಪಟ್ಟಿಗಳ ನ್ನಿಡಿಯುವ ನೆಪದಲ್ಲಿ ಕಿಸೆಗೆ ಕೈಹಾಕಿ ಪರ್ಸ್‌ಗಳಿಗಾಗಿ ತಡಕುತ್ತಿದ್ದರು. ವ್ಯಾನಿನ ಒಳಗೆ ಸಂಪೂರ್ಣ ಹೆಂಡದ ವಾಸನೆ ಹರಡಿತ್ತು. ಅವರೆಲ್ಲ ಕಂಠಪೂರ್ತಿ ಸಾರಾಯಿ ಕುಡಿದದ್ದು ಸ್ಪಷ್ಟವಾಗಿತ್ತು. ಅವರು ನಿಂತಲ್ಲಿ ನಿಲ್ಲುತ್ತಿರಲಿಲ್ಲ. ತೂರಾಡುತ್ತಿದ್ದರು.

ಒಬ್ಬ ನನ್ನೆಡೆ ಬಾಗಿ ನನ್ನಲ್ಲಿದ್ದ ಚರ್ಮದ ಕೈಚೀಲವನ್ನು ಕಸಿದುಕೊಂಡ. ಅದರೊಳಗಿದ್ದ ನನ್ನ ಪೆನ್ನನ್ನು ತೆಗೆದು ಎಸೆದರು. ಅದರ ಹಿಂದಿನ ದಿನ ಸುಮಾರು 12 ಬೆತ್ತಲೆ ಭಕ್ತರೊಡನೆ ನಡೆಸಿದ ಸಂದರ್ಶನ ವಿವರಗಳೆಲ್ಲವನ್ನು ಒಳಗೊಂಡಿದ್ದ ನನ್ನ ಡೈರಿಯನ್ನು ಅತ್ತ ಅವೆತ್ತಲೋ ಒಗೆದು, ಆ ಕೈಚೀಲದಲ್ಲಿ ಮತ್ತೇನೂ ಸಿಗದ ಕಾರಣ ಅದನ್ನೂ ಎಸೆದು ಉಳಿದವರ ಮೇಲೆ ಎರಗತೊಡಗಿದ.

(ಮೂರನೇ ಪುಟಕ್ಕೆ)

IN THE COURT OF THE CIVIL JUDGE OF MANGALORE DAKSHINA KANNADA

S. C. No. 310 of 1985

Between

Syndicate Bank —Plaintiff

and

M. Venkatesh Pai and another - Defendants

To,

1st Defendant

Sri M. Venkatesh Pai son of Vasudeva Pai General Merchant Ashoknagar, Mangalore - 575004.

Take notice that the plaintiff named above filed a suit for recovery of a sum of Rs. 1,696-25 with future interest and costs and that the suit stands posted to 8-4-1986 at 11 A.M. for your appearance, if you fails to appear either in person or through an Advocate, the suit will be decided exparte.

— By Orders of the Court.

V. Subraya
Advocate for Plaintiff

ಹಾವು ಕಚ್ಚಿ ಸಾವು

ಉಡುಪಿ, ಮಾ. 25- ಮಣಿಪಾಲದ ಅಕ್ಕರ ನಗರದಲ್ಲಿ ಹನಿವಾರ ರಾತ್ರಿ ವಿಷದ ಹಾವೊಂದು ಕಚ್ಚಿ ಓರ್ವ ಮಹಿಳೆ ಅಸುನೀಗಿದ ಬಗ್ಗೆ ವರದಿಯಾಗಿದೆ.

ಸೂಸನ್ ಡಾಸ್ (40)ಗೆ ವಿಷದ ಹಾವು ಕಚ್ಚಿದಾಗ ಆಕೆಯನ್ನು ಕೂಡಲೇ ಮಣಿಪಾಲದ ಆಸ್ಪತ್ರೆಗೆ ಸೇರಿಸಲಾಯಿತು ಅಲ್ಲಿ ಅವರು ಮೃತಪಟ್ಟರು.

Change of Name: I, P. Sheena, S/o Late S. Battu Naik, Aged 33 years residing at Hopei Chinese Restaurant, Hotel Sujatha Mangalore-1, have Changed my name as P. Srinivas on my own accord.

ಲಕ್ಕಿಡಿಪ್: ನ್ಯೂ ರೋಜು ಫ್ರೆಂಡ್ಸ್ ಗ್ಯಾದರಿಂಗ್, ಬಿಜೈ ನ್ಯೂ ರೋಡು, ಮಂಗಳೂರು-1 ಇವರ ವಾರ್ಷಿಕೋತ್ಸವದ ಸಲುವಾಗಿ ತೆಗೆದ ಲಕ್ಕಿಡಿಪ್ ಡ್ರಾ ಫಲಿತಾಂಶ 1) 0152, 2) 2653, 3) 4416, 4) 2733, 5) 2429. ಬಹುಮಾನವನ್ನು 10 ದಿನಗಳೊಳಗೆ ಪಡೆದುಕೊಳ್ಳತಕ್ಕದ್ದು.

ಕೋಲಾರದಲ್ಲಿ ಸಣ್ಣ ಉದ್ದಿಮೆಗೆ ಒತ್ತಾಯ

ಹೊಸದಿಲ್ಲಿ, ಮಾ. 25- ಹಸಿವು ಮತ್ತು ಸಾವುಗಳಿಂದ ಜನರನ್ನು ರಕ್ಷಿಸಲು ಕರ್ನಾಟಕ ರಾಜ್ಯದ ಕೋಲಾರ ಜಿಲ್ಲೆಯ ವಿವಿಧೆಡೆ ಸಣ್ಣ ಹಾಗೂ ಮಧ್ಯಮ ಪ್ರಮಾಣದ ಕೈಗಾರಿಕೆಗಳನ್ನು ಸ್ಥಾಪಿಸುವಂತೆ ಜನತಾದ ಡಾ। ವಿ. ವೆಂಕಟೇಶ್ ಇಂದು ಕೇಂದ್ರ ಸರಕಾರವನ್ನು ವಿನಂತಿಸಿಕೊಂಡರು.

ಕರ್ನಾಟಕದ ಅತ್ಯಂತ ಹಿಂದುಳಿದ ಪ್ರದೇಶವೆಂದರೆ ಕೋಲಾರ. ಆದರೂ ಅದನ್ನು "ಕೈಗಾರಿಕೆ ರಹಿತ ಜಿಲ್ಲೆ" ಎಂದು ಘೋಷಿಸಲಾಗಿಲ್ಲ. ತೀವ್ರ ಅಭಾವ ಪರಿಸ್ಥಿತಿ ಅಲ್ಲಿ ತಲೆದೋರಿದ್ದು ನಿರುದ್ಯೋಗಕ್ಕೆ ಕಾರಣವಾಗಿದೆ ಎಂದು ಅವರು, ವಿಶೇಷ ಸೂಚನೆ ಮೂಲಕ ಲೋಕಸಭೆಯಲ್ಲಿ ತಮ್ಮ ಬೇಡಿಕೆ ಮುಂದಿಟ್ಟರು.

ಮಧ್ಯಪ್ರದೇಶದ ಬಸ್ತಾರ್ ಜಿಲ್ಲೆ ಹಾಗೂ ರಾಜಸ್ಥಾನದ ಚುರು ಜಿಲ್ಲೆಗಳಲ್ಲಿಯೂ ವಿದ್ಯುತ್ ಟ್ರಾನ್ಸ್‌ಮಿಟರ್ ಸಹಿತ ಕೈಗಾರಿಕೆಗಳು ಸ್ಥಾಪನೆಗೊಳ್ಳಬೇಕೆಂದು ಕಾಂಗ್ರೆಸ್ ಮಹಿಳಾ ರಾಮ್ ಸೋಂಧಿ ಹಾಗೂ ಮತ್ತೊಬ್ಬ ಸದಸ್ಯ ಸರೇಂದ್ರ ಬುದಾನಿಯಾ ಕೇಂದ್ರ ಸರಕಾರವನ್ನು ವಿನಂತಿಸಿದರು.

ಯುರೇನಿಯಂ ನಿಕ್ಷೇಪ

ಆರ್ಥಿಕವಾಗಿ ಲಾಭದಾಯಕವಾಗುವ ಯುರೇನಿಯಂ ನಿಕ್ಷೇಪ ಈಗಿನವರೆಗೂ ಕೋಲಾರ ಚಿನ್ನದ ಗಣಿಯಲ್ಲಿ ಕಂಡು ಬಂದಿಲ್ಲವೆಂದು ಕೇಂದ್ರ ಉಕ್ಕು ಮತ್ತು ಗಣಿ ಸಚಿವ ಕೆ. ಸಿ. ಪಂತ್ ತಿಳಿಸಿದರು.

ಪ್ರೊ। ನಿರ್ಮಲಾ ಕುಮಾರಿ ಶಕಾವತ್ ಅವರಿಗೆ ಲಿಖಿತದಲ್ಲಿ ಉತ್ತರ ನೀಡಿದ ಸಚಿವರು, ಅಣುಶಕ್ತಿ ಇಲಾಖೆಯ ಅಣು ಖನಿಜ ವಿಭಾಗ ಆಗಾಗ ಗಣಿಯಲ್ಲಿ ವಿಶ್ಲೇಷಣೆ ಕಾರ್ಯ ನಡೆಸುತ್ತಿದ್ದರೂ ಇಲ್ಲಿಯವರೆಗೂ ಯುರೇನಿಯಂ ಇರುವುದನ್ನು ಅದು ಕಂಡಿಲ್ಲ ಎಂದು ತಿಳಿಸಿದರು.

ಬ್ಯಾಂಕ್ ದರೋಡೆ ತಡೆ ಚರ್ಚೆಗೆ ಇಂದು ಅಧಿಕಾರಿಗಳ ಸಭೆ

(ಮುಂಗಾರು ವರದಿ)

ಬೆಂಗಳೂರು, ಮಾ. 25- ಬ್ಯಾಂಕುಗಳಲ್ಲಿ ದಿನೇ ದಿನೇ ಹೆಚ್ಚುತ್ತಿರುವ ಲೂಟಿ, ದರೋಡೆಗಳನ್ನು ಕೊನೆಗಾಣಿಸುವ ಸಲುವಾಗಿ ರಾಷ್ಟ್ರೀಕೃತ ಬ್ಯಾಂಕ್ ಹಾಗೂ ಪೊಲೀಸ್ ಅಧಿಕಾರಿಗಳ ಸಭೆ ನಾಳೆ ನಡೆಯಲಿದೆ.

ಸಿಂಡಿಕೇಟ್ ಬ್ಯಾಂಕ್ ವತಿಯಿಂದ ಏರ್ಪಡಿಸಿದ ಒಂದು ದಿನದ ಈ ಸಮಾರಂಭದಲ್ಲಿ ರಿಸರ್ವ್ ಬ್ಯಾಂಕ್ ಮತ್ತು ಭಾರತೀಯ ಸ್ಟೇಟ್ ಬ್ಯಾಂಕ್ ಸೇರಿದಂತೆ ಎಲ್ಲ ರಾಷ್ಟ್ರೀಕೃತ ಬ್ಯಾಂಕುಗಳ ಸುಮಾರು 30 ವರಿಷ್ಠರು ಅಲ್ಲದೆ ಕರ್ನಾಟಕದ ಹಿರಿಯ ಪೊಲೀಸ್ ಅಧಿಕಾರಿಗಳು ಮತ್ತು ಅಗ್ನಿ ಶಾಮಕ ದಳದ ಅಧಿಕಾರಿಗಳು ಭಾಗವಹಿಸಲಿರುವರು.

ಪೊಲೀಸ್ ಕಮಿಷನರ್ ಪಿ. ಜಿ. ಹರ್ಲಂಕರ್ ಅಧ್ಯಕ್ಷತೆ ವಹಿಸಲಿರುವರು. ಕೇಂದ್ರ ಸರಕಾರದ ಆದೇಶದ ಮೇರೆಗೆ ನಡೆಯಲಿರುವ ಈ ಸಭೆಯು ಕರ್ನಾಟಕದಲ್ಲಿ ಪ್ರಥಮ ಬಾರಿಗೆ ನಡೆಯಲಿದೆ.

ತಮಿಳು ಉಗ್ರಗಾಮಿ ವಶದಲ್ಲಿ ಜಾಫ್ನಾ

ಮದರಾಸು, ಮಾ. 25- ಶ್ರೀಲಂಕಾ ಭದ್ರತಾ ಪಡೆ ತಮಿಳರ ವಿರುದ್ಧ ಯುದ್ಧ ಹೂಡಿದೆಯಾದರೂ ದೇಶದ ಉತ್ತರ ಪ್ರಾಂತ ಹಾಗೂ ಪೂರ್ವ ಪ್ರಾಂತದ ಕೆಲವು ಭಾಗಗಳು ತಮಿಳು ಉಗ್ರಗಾಮಿಗಳ ಪೂರ್ಣ ನಿಯಂತ್ರಣಕ್ಕೊಳಪಟ್ಟಿವೆ ಎಂದು ತಮಿಳು ಈಳಂ ವಿಮೋಚನಾ ವ್ಯಾಘ್ರಗಳ ಅಧಿಕೃತ ವಕ್ತಾರ ಡಾ। ಎ.ಎಸ್. ಬಾಲಸಿಂಗಂ ತಿಳಿಸಿದ್ದಾರೆ.

ಭದ್ರತಾ ಪಡೆಯ ವಾಯು ದಾಳಿಯಿಂದ ತಮಿಳು ನಾಗರಿಕರ ರಕ್ಷಣೆಗಾಗಿ ರಕ್ಷಣಾ ವ್ಯವಸ್ಥೆಯೊಂದನ್ನು ಏರ್ಪಡಿಸುವಲ್ಲಿ ತಮಿಳು ಈಳಂ ವಿಮೋಚನಾ ವ್ಯಾಘ್ರ ಸಂಘಟನೆ ನಿರತರಾಗಿರುವುದಾಗಿಯೂ ಅವರು ಇಂದಿಲ್ಲಿ ಪತ್ರಿಕಾ ವರದಿಗಾರರಿಗೆ ತಿಳಿಸಿದರು.

ತಮಿಳರ ಜೀವ ರಕ್ಷಣೆಗಾಗಿ ತಾವು ಅತ್ಯಾಧುನಿಕ ಶಸ್ತ್ರಗಳನ್ನು ಬಳಸುವುದಾಗಿ ತಿಳಿಸಿದ ಡಾ। ಬಾಲಸಿಂಗಂ ವಾಯು ದಾಳಿಯು ಉದ್ದೇಶ ನಾಗರಿಕರನ್ನು ಭೀತಿಗೊಳಪಡಿಸಿ ಅವರ ನೈತಿಕತೆಯನ್ನು ಮುರಿಯುವುದಾಗಿದೆ. ಆದರೆ ತಮಿಳರ ಬೆಂಬಲ ತಮಗೆ ಬಲವಾಗಿದ್ದು ಸರಕಾರವು ಅವರ ವಿರೋಧವನ್ನು ಮುರಿಯುವಲ್ಲಿ ವಿಫಲವಾಗಿದೆ ಎಂದವರು ಹೇಳಿದರು.

ಕೋನಾಗೆ ಛೀಮಾರಿ

(ಮೊದಲ ಪುಟದಿಂದ)

ಮಾರ್ಚ್ 6ರಂದು ಮುಂಬಯಿ ವಿಶ್ವವಿದ್ಯಾಲಯದ ಪದವಿಪ್ರದಾನ ಸಮಾರಂಭ ನಡೆದಾಗ, ವಿದ್ಯಾರ್ಥಿಗಳ ಒಂದು ವರ್ಗ ಅವರನ್ನು ಸಭಾಂಗಣಕ್ಕೆ ಪ್ರವೇಶಿಸದಂತೆ ತಡೆದಿತ್ತು.

ವಿ.ಪಿ. ಆವರಣದಲ್ಲಿ ಅವರನ್ನು ಘೇರಾಯಿಸಿದ ವಿದ್ಯಾರ್ಥಿಗಳು ಭ್ರಷ್ಟಾಚಾರ ವಿರೋಧಿ ಘೋಷಣೆ ಕೂಗಿ, ಅಂಕಪಟ್ಟಿ ಹಗರಣದಲ್ಲಿ ವಹಿಸಿದ ಪಾತ್ರಕ್ಕಾಗಿ ರಾಜೀನಾಮೆ ನೀಡುವಂತೆ ಆಗ್ರಹಿಸಿದ್ದರು.

ರಾಜೀನಾಮೆ?

ಈ ನಡುವೆ, ಕೋನಾ ಪ್ರಭಾಕರರಾವ್ ಅವರು ರಾಜ್ಯಪಾಲ ಪದವಿಗೆ ರಾಜೀನಾಮೆ ನೀಡಿದ್ದಾರೆ ಎಂದು ಹರಡಿದ ವದಂತಿಗಳನ್ನು ರಾಜಭವನದ ಮೂಲಗಳು ನಿರಾಕರಿಸಿವೆ.

'ಈ ವರದಿಗಳಲ್ಲಿ ಸತ್ಯಾಂಶ ಇಲ್ಲ' ಎಂದು ಮೂಲಗಳು 'ಪಿಟಿಐ'ಗೆ ತಿಳಿಸಿವೆ.



ರೆ। ಫಾ। ಆಲ್ಫ್ರೆಡ್ ಜೆ. ಟೆಲ್ಲಿಸ್ ನಿಧನ

ಮಂಗಳೂರು, ಮಾ. 25- ಕಲ್ಯಾಣಪುರದ ಮಿಲಾಗ್ರಿಸ್ ಪ್ರೌಢ ಶಾಲೆಯ ಜನಪ್ರಿಯ ಮುಖ್ಯೋಪಾಧ್ಯಾಯರಾಗಿದ್ದ ರೆವರೆಂಡ್ ಫಾದರ್ ಆಲ್ಫ್ರೆಡ್ ಜೆ. ಟೆಲ್ಲಿಸ್ ಇಂದು ಬೆಳಗ್ಗೆ ಮಂಗಳೂರಿನಲ್ಲಿ ನಿಧನಹೊಂದಿದರು.

1938ರಿಂದ 1965ರ ವರೆಗೆ ಅಂದರೆ ಸುಮಾರು 27 ವರ್ಷಗಳ ಕಾಲ ಮಿಲಾಗ್ರಿಸ್ ಪ್ರೌಢ ಶಾಲೆಯಲ್ಲಿ ಸೇವೆ ಸಲ್ಲಿಸಿದ್ದ ಅವರು ಈ ಶಾಲೆಯ ಈಗಿನ ಪ್ರಬುದ್ಧಾವಸ್ಥೆಗೆ ಕಾರಣರಾಗಿದ್ದರು.

ಉತ್ತಮ ಶಿಕ್ಷಕ, ದಕ್ಷ ಆಡಳಿತಗಾರ ಸಹೋದ್ಯೋಗಿಗಳೊಂದಿಗೆ ಸೌಹಾರ್ದದ ಸಂಬಂಧ, ವಿದ್ಯಾರ್ಥಿಗಳಿಗೆ ಅಚ್ಚುಮೆಚ್ಚಿನ ಆದರೆ ಅಷ್ಟೇ ಶಿಸ್ತಿನ ಉಪಾಧ್ಯಾಯ, ಈ ಎಲ್ಲಾ ಒಳ್ಳೆಯ ಗುಣಗಳನ್ನು ಅವರು ಹೊಂದಿದ್ದರು.

1965ರಲ್ಲಿ ಸೇವೆಯಿಂದ ನಿವೃತ್ತಿಗೊಂಡರೂ, ಶಾಲೆಯ ಸರ್ವತೋಮುಖ ಬೆಳವಣಿಗೆಯಲ್ಲಿ ಅವರು ತೀವ್ರ ಆಸಕ್ತಿ ಹೊಂದಿದ್ದರು.

WANTED

Applications from Muslim Candidates in their own handwriting are invited for the following posts to reach the undersigned on or before 15-4-1986.

1. **MECHANICAL SUPERVISOR** - 5 Years experience in Buses and Vehicles maintenance and Office Work.
2. **CLERK** - Graduates with 3 Years experience in office and outdoor executive work.
3. **CLERK** - Graduates with 3 Years axperience in Accounts and Office work.
4. **STORE KEEPER** - Educated and well experienced in maintenance of Stores and Accounts.
5. **WARDER**: - Educated and experienced in the maintenance of hostel and mess of the Seyyid Madani Arabic College.

For further particulars contact: Haji U. K. Ebrahim, President, Darga Shareef, P.B. No. 1201, P.O. Ullal (D. K.).

ಪ್ರವಾಸಿ ಕುಟೀರ ಪ್ರಾರಂಭೋತ್ಸವ

ಮಂಗಳೂರು, ಮಾ. 25- ಕಾರ್ಕಳದಲ್ಲಿ ನಿರ್ಮಿಸಿರುವ ಪ್ರವಾಸಿ ಕುಟೀರದ ಪ್ರಾರಂಭೋತ್ಸವವನ್ನು ಮಾ. 27ರಂದು ಸಂಜೆ 4 ಗಂಟೆಗೆ ಶಾಸಕ ಎಂ. ವೀರಪ್ಪ ಮೊಯಿಲಿ ಅವರು ನೆರವೇರಿಸುವರು.

ಸಮಾರಂಭದ ಅಧ್ಯಕ್ಷತೆಯನ್ನು ಶಾಸಕರಾದ ಅಮರನಾಥ ಶೆಟ್ಟಿ ಅವರು ವಹಿಸಲಿದ್ದು ಮುಖ್ಯ ಅತಿಥಿಗಳಾಗಿ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ನಿಗಮದ ಅಧ್ಯಕ್ಷರಾದ ಬಾಪು ಪದ್ಮನಾಭ ಶೆಟ್ಟಿ ಹಾಗೂ ಕಾರ್ಕಳ ನಗರ ಸಭಾ ಅಧ್ಯಕ್ಷ ಕೆ. ಸದಾನಂದ ಕಾಮತ್ ಅವರು ಭಾಗವಹಿಸುವರು.

ಮೋಟಾರ್‌ಸೈಕಲ್ ಡಿಕ್ಕಿ ಪಾದಚಾರಿಗೆ ಗಾಯ

ಉಡುಪಿ, ಮಾ. 25- ಇಲ್ಲಿಗೆ ಸಮೀಪದ ಅಲೆವೂರಿನಲ್ಲಿ ಸೋಮವಾರ ಕುಕ್ಕಿಲ ಉಪ್ಪಾರ (60) ಎಂಬವರಿಗೆ ಮೋಟಾರ್ ಸೈಕಲೊಂದು ಡಿಕ್ಕಿ ಹೊಡೆದ ಪರಿಣಾಮವಾಗಿ ಅವರು ಗಾಯಗೊಂಡು ಉಡುಪಿ ಆಸ್ಪತ್ರೆಗೆ ಸೇರಿಸಲ್ಪಟ್ಟರು.

ಈ ಸಂಬಂಧ ಮೋಟಾರ್ ಸೈಕಲ್ ಚಾಲಕನ ವಿರುದ್ಧ ಕೇಸು ದಾಖಲಿಸಲಾಗಿದ್ದು ತನಿಖೆ ನಡೆಯುತ್ತಿದೆ.

ಜನತಾ ಬಣಗಳ ಜಗಳ

(ಮೊದಲ ಪುಟದಿಂದ)

ಚಂದ್ರಶೇಖರ್ ಕೂಡಾ ಶಾಸಕರ ಗುಂಪಿನತ್ತಲೇ ಒಲವು ತೋರಿಸುತ್ತಿರುವುದು ಅವರಿಗೆ ಮುಜುಗರಕ್ಕೆಡೆ ಮಾಡಿದೆ.

ಇತ್ತೀಚೆಗೆ ನಗರಾಭಿವೃದ್ಧಿ ಮಂಡಳಿ ಮತ್ತು ನಗರ ಯೋಜನಾ ಪ್ರಾಧಿಕಾರಗಳ ಅಧ್ಯಕ್ಷಸ್ಥಾನಕ್ಕೆ ನಡೆದ ನೇಮಕಾತಿಯಲ್ಲಿ ಶಾಸಕರ ಬಣ ಮೇಲುಗೈ ಸಾಧಿಸಿದ್ದು ಸ್ಪಷ್ಟವಾಗಿದೆ. ನಗರಾಭಿವೃದ್ಧಿ ಮಂಡಳಿಗೆ ಉಳ್ಳಾಲದವರು ಸ್ಪರ್ಧೋತ್ಸುಕರಿದ್ದರೂ ನೇಮಕಗೊಂಡ ಮಹಮ್ಮದ್ ಹುಸೇನ್ ಶಾಸಕರ ಪರಬಲವುಳ್ಳವರು.

ನಗರ ಯೋಜನಾ ಪ್ರಾಧಿಕಾರಕ್ಕೆ ಮಂಗಳೂರು ನಗರ ಸಮಿತಿಯ ಅಧ್ಯಕ್ಷರಾದ ಮೋಹನ ದಾಸ ಹೆಗ್ಡೆ ಪ್ರಮುಖ ಅಭ್ಯರ್ಥಿಯಾಗಿದ್ದದ್ದು ಬಹಿರಂಗ ರಹಸ್ಯ. ಹೆಗ್ಡೆ ಅವರ್ಕೆ ಬಹುತೇಕ ಖಚಿತವೆನಿಸಿದ ಹಂತದಲ್ಲಿಯೇ ಅದು ಸುರೇಶ್ ಬಲ್ಲಾಳ್ ಅವರಿಗೆ ದಕ್ಕಿದ್ದು ಅಧ್ಯಕ್ಷರ ಗುಂಪಿಗೆ ಅಸಮಾಧಾನ ಉಂಟು ಮಾಡಿದೆ. ಇದಕ್ಕೆ ಅಮರನಾಥ ಶೆಟ್ಟಿಯವರ ಅಡ್ಡಗಾಲೇ ಕಾರಣವೆಂದು ಹೆಗ್ಡೆ ಬೆಂಬಲಿಗರ ಹೇಳಿಕೆ. ನಿಷ್ಠಾವಂತ ಕಾರ್ಯಕರ್ತರನ್ನು ಕಡೆಗಣಿಸಿ ಭಾಸ್ಕರ ಶೆಟ್ಟಿಯವರಂತಹ 'ಅವಕಾಶವಾದಿ'ಗಳನ್ನು ಪಕ್ಷಕ್ಕೆ ಸೇರಿಸುತ್ತಿರುವುದನ್ನು ಪ್ರತಿಭಟಿಸಿದ್ದೇ ಹೆಗ್ಡೆಯವರ ವಿರುದ್ಧ ಶಾಸಕರ ಸಿಟ್ಟಿಗೆ ಕಾರಣವೆನ್ನುತ್ತಾರೆ ಅವರು.

ತೆರೆಯ ಮರೆಯಲ್ಲಿನ ಈ ವಿದ್ಯಮಾನಗಳು [illegible] ಚುನಾವಣೆಯ ಬಗ್ಗೆ ರಾಜ್ಯ ಅಧ್ಯಕ್ಷರಿಂದ ಆದೇಶ ಹೊರಟಾಗ. ಈ ಬಾರಿ ಅಂತಿಮ ಸಮರವನ್ನೇ ಸಾರಿರುವ ಶಾಸಕರ ಬಣ ನೇರವಾಗಿ ಜಿಲ್ಲೆಯ ಅಧ್ಯಕ್ಷಗಾದಿಗೆ ದಾಳಿಯಿಟ್ಟಿದೆ. ಇದನ್ನು ಮೊದಲೇ ನಿರೀಕ್ಷಿಸಿದ್ದ ಅಧ್ಯಕ್ಷರ ಗುಂಪು ಅದಕ್ಕೆ ಪ್ರತಿವ್ಯೂಹವನ್ನೇ ಸಿದ್ಧಗೊಳಿಸಿತ್ತು.

ಒಂದೆ ವಿಧಾನಸಭಾ ಕ್ಷೇತ್ರ ಸಮಿತಿಗಳ ರಚನೆಯಾಗುತ್ತಿದ್ದರೆ ಈ ಬಾರಿ ತಾಲೂಕು ಸಮಿತಿಗಳ ಆಯ್ಕೆ ನಡೆಯುತ್ತಿದೆ. ಪ್ರತಿ ತಾಲೂಕಿನಲ್ಲಿನ ಸಕ್ರಿಯ ಸದಸ್ಯರು ಮಾತ್ರ ಅಧ್ಯಕ್ಷರ ಚುನಾವಣೆಯಲ್ಲಿ ಭಾಗವಹಿಸಲು ಅರ್ಹರು. (25 ಸದಸ್ಯರನ್ನು ನೋಂದಣಿ ಮಾಡಿದವರು ಸಕ್ರಿಯ ಸದಸ್ಯರಾಗುತ್ತಾರೆ)

ಚುನಾವಣೆಯ ಸುದ್ದಿ ಹೊರಡುತ್ತಿದ್ದಂತೆ ಬಿರುಸುಗೊಂಡ ಸದಸ್ಯರನೋಂದಣಿ ಕಾರ್ಯ ಉಭಯ ಬಣಗಳಿಂದಲೂ ಸಂಶಯಭರಿತ ಟೀಕೆಗಳಿಗೆ ದಾರಿ ಮಾಡಿಕೊಟ್ಟಿತು.

ಅಧ್ಯಕ್ಷ ರಾಮಯ್ಯ ನಾಯ್ಕರು ಸದಸ್ಯರ ನೋಂದಣಿಪುಸ್ತಕವನ್ನು ತಮ್ಮ ಬೆಂಬಲಿಗರಿಗೆ ಮಾತ್ರ ಹಂಚುತ್ತಿದ್ದು ಈ ಚಟುವಟಿಕೆ ಮಂಗಳೂರಿನ ಹಂಪನಕಟ್ಟೆಯ ಹೊಟೇಲಿನಿಂದಲೇ ನಡೆಯುತ್ತಿದ್ದು ತಮಗೆ ಆ ನೋಂದಣಿ ಪುಸ್ತಕಗಳನ್ನು ನೀಡಿಲ್ಲವೆಂದು ಶಾಸಕರ ಗುಂಪಿನ ಆರೋಪ.

ಅಮರನಾಥ ಶೆಟ್ಟಿಯವರು ನೇರವಾಗಿ ಬೆಂಗಳೂರಿನಿಂದಲೇ ನೋಂದಣಿ ಪುಸ್ತಕಗಳನ್ನು ತಂದು ಜಿಲ್ಲೆಯಾದ್ಯಂತ ಹಂಚುತ್ತಾ ತಮ್ಮ ಲಾಬಿ ನಿರ್ಮಿಸುತ್ತಿದ್ದಾರೆ ಎಂಬುದು ಅಧ್ಯಕ್ಷರ ಗುಂಪಿನ ಪ್ರತ್ಯಾರೋಪ.

ಈ ಆರೋಪ ಪ್ರತ್ಯಾರೋಪಗಳ ನಡುವೆ ಅಧ್ಯಕ್ಷರು ತಾಲೂಕು ಚುನಾವಣೆಗಳನ್ನು ಪ್ರಕಟಿತ ದಿನಗಳಲ್ಲಿಯೇ ಮುಗಿಸಲು ಮುಂದುವರಿದರು. ಈಗಾಗಲೇ ಅನಧಿಕೃತವಾಗಿ ತಾಲೂಕುಗಳ ಅಧ್ಯಕ್ಷರ ಆಯ್ಕೆ ನಡೆದಿದ್ದರೂ ಇದು ಅಕ್ರಮ ಮತ್ತು ಪಕ್ಷದ ಸಂವಿಧಾನಕ್ಕೆ ವಿರೋಧವಾದುದು ಎಂದು ಅತೃಪ್ತರ ಆರೋಪ.

ನಡೆದಿದೆಯೆನ್ನಲಾದ ತಾಲೂಕು ಚುನಾವಣೆಗಳು ಅಕ್ರಮವಾದುದೆನ್ನುವ ಶಾಸಕರ ಬೆಂಬಲಿಗರು ಹಲವಾರು ಕಾರಣಗಳನ್ನು ಮುಂದೊಡ್ಡುತ್ತಾರೆ.

ಮೊದಲನೆಯದಾಗಿ ಪಕ್ಷದ ಜಿಲ್ಲಾ ಚುನಾವಣಾ ಅಧಿಕಾರಿಯ ನೇಮಕ ಕಾನೂನು ಪ್ರಕಾರ ನಡೆದಿಲ್ಲ. ಅಧ್ಯಕ್ಷರ ಬೆಂಬಲಿಗರ ಅಂತರಂಗ[illegible] ನಡೆದಿದ್ದು, ತಾಲೂಕು ಚುನಾ[illegible] ಸಹಾಯಕ ಚುನಾವಣಾ ಅಧಿಕಾರಿಗಳ ಆಯ್ಕೆ ಕೂಡಾ ಸಕ್ರಮ ವಿಧಾನದಲ್ಲಿ ನಡೆದಿಲ್ಲ ಎಂದು ಅವರ ಹೇಳಿಕೆ.

ಚುನಾವಣೆ ನಡೆಯುವ ಮುನ್ನ ಆಯಾ ತಾಲೂಕಿನ ಸಕ್ರಿಯ ಸದಸ್ಯರ ಹೆಸರನ್ನು ಪಕ್ಷದ ಜಿಲ್ಲಾ ಕಚೇರಿ ಮತ್ತು ತಾಲೂಕು ಕಚೇರಿಯಲ್ಲಿ ಪ್ರಕಟಿಸಿಲ್ಲ. ಚುನಾವಣೆಯ ದಿನಾಂಕವನ್ನು ಅವಸರವಾಗಿ ಪ್ರಕಟಿಸಿದ್ದು ನೋಂದಣಿ, ಹಿಂತೆಗೆತ ಮತ್ತು ಪರಿಶೀಲನೆಗೆ ಪಕ್ಷ ಸಂವಿಧಾನಕ್ಕೆ ಅನುಸಾರವಾಗಿ ಸೂಕ್ತ ಸಮಯ ನೀಡಿಲ್ಲ ಎಂಬುದು ಶಾಸಕರ ಬಣದ ಇತರ ಆರೋಪಗಳು.

ಮಂಗಳೂರು ತಾಲೂಕು ಸಮಿತಿಯ ವ್ಯಾಪ್ತಿಯಲ್ಲಿ ಮಂಗಳೂರು, ಉಳ್ಳಾಲ, ಸುರತ್ಕಲ್, ವಿಟ್ಲ ಮತ್ತು ಬಂಟ್ವಾಳದ ಭಾಗಗಳು ಹಾಗೂ ಮೂಲ್ಕಿ ಸೇರ್ಪಡೆಯಾಗಿದ್ದು, ಅಲ್ಲಿನ ಹೆಚ್ಚಿನ ಕಾರ್ಯಕರ್ತರಿಂದ ಚುನಾವಣೆಯ ದಿನಾಂಕವನ್ನು ಬಚ್ಚಿಡಲಾಗಿತ್ತು ಎಂದು ಅಧ್ಯಕ್ಷರ ಗುಂಪಿನ ವಿರೋಧಿಗಳು ಹೇಳುತ್ತಿದ್ದಾರೆ.

ಸುರತ್ಕಲ್‌ನಲ್ಲಿ ಒಟ್ಟು 147 ಸಕ್ರಿಯ ಸದಸ್ಯರಿದ್ದು, ಅವರ ಹೆಸರನ್ನು ಪಕ್ಷದ ಜಿಲ್ಲಾ ಕಚೇರಿಯಲ್ಲಿ ಪ್ರಕಟಿಸದೆ, ಕಡೆಗಣಿಸಲಾಗಿದೆ ಎಂದು ಅಲ್ಲಿನ ಕಾರ್ಯಕರ್ತರು ಪಕ್ಷದ ರಾಜ್ಯ ಅಧ್ಯಕ್ಷರಿಗೆ ದೂರು ಸಲ್ಲಿಸಿದ್ದು, ಆ ಸದಸ್ಯರನ್ನು ಸೇರಿಸಿಕೊಳ್ಳಲು ಅಧ್ಯಕ್ಷರಿಂದ ಆದೇಶ ಬಂದಿದೆಯೆನ್ನಲಾಗಿದೆ.

ಈ ಎಲ್ಲ ಅಂಶಗಳನ್ನು ಗಮನಿಸಿ ಚುನಾವಣೆಯನ್ನು ಮುಂದೂಡಿ ನ್ಯಾಯೋಚಿತ ರೀತಿಯಲ್ಲಿ ಚುನಾವಣೆ ನಡೆಯುವಂತೆ ನೋಡಿಕೊಳ್ಳಬೇಕೆಂದು ಶಾಸಕರ ಬಣ ಅಧ್ಯಕ್ಷ ಚಂದ್ರಶೇಖರ್ ಅವರಿಗೆ ಮನವಿ ಮಾಡಿದೆ. ಶಾಸಕರು ಮತ್ತು ಅವರ ಬೆಂಬಲಿಗರು ಕಳೆದ ಶನಿವಾರವೇ ಬೆಂಗಳೂರಿಗೆ ತೆರಳಿದ್ದು, ಸೋಮವಾರ ರಾತ್ರಿ ಅಧ್ಯಕ್ಷರೊಡನೆ ಮಾತುಕತೆ ನಡೆಸಿದ್ದರು. ಅವರೆ ಜಿಲ್ಲಾಧ್ಯಕ್ಷರ ಗೈರುಹಾಜರಿಯಿಂದಾಗಿ ಸ್ಪಷ್ಟವಾದ ಫಲಿತಾಂಶ ಪ್ರಕಟವಾಗಿಲ್ಲ.

ತಮ್ಮನ್ನು ಕಡೆಗಣಿಸಿ ಪ್ರಸಕ್ತ ಚುನಾವಣೆಯನ್ನು ಮಾನ್ಯಮಾಡಿದರೆ, ತಾಲೂಕು ಮಟ್ಟದಲ್ಲಿಯೇ ಪ್ರತಿ ಸಂಘಟನೆ ಕಟ್ಟುತ್ತೇವೆ ಎಂಬ ಹೇಳಿಕೆ ನೀಡುವಷ್ಟರ ಮಟ್ಟಿಗೆ ಶಾಸಕರ ಗುಂಪು ಅಸಮಾಧಾನ ಹೊಂದಿದೆ. ಚುನಾವಣೆ ನಡೆದಲ್ಲಿ ನ್ಯಾಯಾಲಯದಲ್ಲಿ ಖಟ್ಲೆ ಹೂಡಲು ಸಿದ್ಧತೆಗಳು ನಡೆಯುತ್ತಿವೆ.

ಸೋಮವಾರದ [illegible] ಸಭೆಯಲ್ಲಿ ಅಧ್ಯಕ್ಷರು, ದ[illegible] ಎಂಟು ತಾಲೂಕುಗಳಲ್ಲಿ ಐದು [illegible] ಗಳಿಗೆ ಈಗಿನ ನಿಗದಿತ ಚುನಾವಣೆಗೆ ವಿರೋಧ ಬಂದಲ್ಲಿ ಚುನಾವಣೆಯನ್ನು ಮುಂದೂಡುವುದಾಗಿ ಹೇಳಿದ್ದಾರೆಂದು ತಿಳಿದು ಬಂದಿದೆ.

ಸುಳ್ಯ, ಕಾರ್ಕಳ, ಉಡುಪಿ, ಮಂಗಳೂರು ಮತ್ತು ಕುಂದಾಪುರಗಳಲ್ಲಿ ತಮಗೆ ಬಹುಸಂಖ್ಯೆಯ ಬೆಂಬಲವಿದೆ ಎನ್ನುವ ಶಾಸಕರ ಗುಂಪು ಚುನಾವಣೆಯನ್ನು ಪ್ರತಿರೋಧಿಸಲು ನಿರ್ಧರಿಸಿದೆ.

ಶಾಸಕರ ಬಣ ಜಿಲ್ಲಾ ಅಧ್ಯಕ್ಷಸ್ಥಾನಕ್ಕೆ ಅಪ್ಪಣ್ಣ ಹೆಗ್ಡೆಯವರ ಹೆಸರನ್ನು ಸೂಚಿಸುತ್ತಿದ್ದರೂ ಲೋಕಯ್ಯ ಶೆಟ್ಟಿ ಮತ್ತು ಎಂ. ಸಂಜೀವ ಅವರೂ ಆ ಬಗ್ಗೆ ಆಸಕ್ತರಾಗಿದ್ದು ತಮ್ಮದೇ ಆದ ಸದಸ್ಯರ ಬೆಂಬಲವನ್ನು ಪಡೆದಿದ್ದಾರೆನ್ನಲಾಗಿದೆ.

ದರೋಡೆಕೋರರ ಐಡೆಂಟಿಫಿಕೇಶನ್ ಪೆರೇಡ್ ಮುಕ್ತಾಯ

ಮಂಗಳೂರು, ಮಾ. 25- ದ. ಕ. ಮತ್ತು ಕಾಸರಗೋಡು ದರೋಡೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಬಂಧಿಸಲಾಗಿರುವ ಆರೋಪಿಗಳ ಐಡೆಂಟಿಫಿಕೇಶನ್ ಪೆರೇಡ್ ನಿನ್ನೆ ಪ್ರಾರಂಭವಾಗಿದ್ದು ಇಂದು ಉಳಿದ ಮೂರು ಜನ ಆರೋಪಿಗಳ ಪೆರೇಡ್ ನಡೆಸಲಾಯಿತು ಎಂದು ತಿಳಿದು ಬಂದಿದೆ.

ಇಂದಿನ ಪೆರೇಡ್‌ನಲ್ಲಿ ಬ್ರಹ್ಮರಕೂಟ್ಲು ಬಸ್ಸಿನಲ್ಲಿ ಪ್ರಕರಣಗಳಿಗೆ ಸಂಬಂಧಿಸಿದ ಸಾಕ್ಷಿಗಳು ಆರೋಪಿಗಳನ್ನು ಗುರುತು ಹಚ್ಚಿದರೆಂದು ಹೇಳಲಾಗಿದೆ.

ಅರಮನೆಗೆ ಬಾಂಬ್

(ಮೊದಲ ಪುಟದಿಂದ)

ಚಕ್ರವರ್ತಿ ಹಿರೋಹಿಟೋರ ಆಳ್ವಿಕೆಯ 60ನೇ ವಾರ್ಷಿಕೋತ್ಸವ [illegible] ಏಪ್ರಿಲ್ 29ರಂದು ಜರಗಲಿರುವುದಕ್ಕೆ ಸಂಬಂಧಿಸಿ ಈ ದಾಳಿ ನಡೆದಿರಬಹುದೆಂದು ಪೊಲೀಸರು ತಿಳಿಸಿರುವರು.

ಜಪಾನಿನ 1930ರ ಮತ್ತು 1940ರ ಯುದ್ಧಗಳಿಗೆ ಹೊಣೆಯಾದ ಚಕ್ರವರ್ತಿ ಹಿರೋಹಿಟೋರವರ 60ನೇ ಸಿಂಹಾಸನಾರೋಹಣ ದಿನಾಚರಣೆಯನ್ನೂ ಬಂಡವಾಳಶಾಹಿ ನಾಯಕರ ಶೃಂಗಸಭೆಯನ್ನು ನುಚ್ಚುನೂರಾಗಿ ಸ್ಫೋಟಿಸುವುದಾಗಿ ಕಳೆದ ಜನವರಿಯಲ್ಲಿ ತೀವ್ರ ಎಡಪಂಥೀಯ ಚುಕಾಕು-ಹಾ ಗುಂಪು ಬೆದರಿಕೆ ಹಾಕಿತ್ತು.

ಈ ದಾಳಿಗಳಿಗೆ ಹೊಣೆ ಯಾರೆಂದು ತಿಳಿದಿಲ್ಲ ಎಂದು ವಾಷಿಂಗ್ಟನ್‌ನಲ್ಲಿ ಅಮೆರಿಕದ ವಿದೇಶಾಂಗ ಖಾತೆ ಸುದ್ದಿ ತಿಳಿದ ಕೂಡಲೇ ಹೇಳಿತಲ್ಲದೆ ಟೋಕಿಯೋದಲ್ಲಿನ ರಾಯಭಾರವನ್ನು ಸಂಪರ್ಕಿಸುತ್ತಿರುವುದಾಗಿ ತಿಳಿಸಿದೆ.

ಸುರೇಂದ್ರನನ್ನು ಒಪ್ಪಿಸಲು ಕೇರಳ ಪೊಲೀಸರ ಅರ್ಜಿ

ಉಡುಪಿ, ಮಾ. 25- ಕಳೆದ ವಾರ ದಸ್ತಗಿರಿಯಾದ ಕುಖ್ಯಾತ ಸುರೇಂದ್ರನನ್ನು ತಮ್ಮ ವಶಕ್ಕೆ ಒಪ್ಪಿಸಬೇಕೆಂದು ಕೇರಳ ಪೊಲೀಸರು ಇಂದು ಇಲ್ಲಿನ ನ್ಯಾಯಾಧೀಶರಿಗೆ ಅರ್ಜಿ ಸಲ್ಲಿಸಿದರು.

ಆದರೆ ನ್ಯಾಯಾಧೀಶರು ಅರ್ಜಿಗೆ ಉತ್ತರಿಸುತ್ತಾ, ಸುರೇಂದ್ರ ಇಲ್ಲಿ ಇಲ್ಲವೆಂದೂ ಆತ ಈಗ ಮಂಗಳೂರು ನ್ಯಾಯಾಲಯದಲ್ಲಿ ಇರುವುದರಿಂದ ಅಲ್ಲಿ ವಿಚಾರಿಸಬೇಕೆಂದೂ ತಿಳಿಸಿರುವುದಾಗಿ ವರದಿಯಾಗಿದೆ.

● ಉಡುಪಿ, ಮಾ. 25-ಇಲ್ಲಿಗೆ ಸಮೀಪದ ಹಂಪನ[illegible]ದಿಂದ ಲಾರಿ[illegible] ಮುಖಾಮುಖಿ ಢಿಕ್ಕಿ ಹೊಡೆದಾಗ ಇಬ್ಬರು ಸ್ಥಳದಲ್ಲೇ ಸಾವನ್ನಪ್ಪಿ, ಓರ್ವ ಆಸ್ಪತ್ರೆಯಲ್ಲಿ ಮೃತಪಟ್ಟನೆಂದು ಪೊಲೀಸರು ತಿಳಿಸಿದ್ದಾರೆ.

[illegible] ಉಪ ಅರಣ್ಯ[illegible]ವಿಭಾಗ, ಮಂಗಳೂರು.

ನಂ:ಎ2:ಹರಾ:1:[illegible]:85-86, [illegible]86.

ಅರಣ್ಯ ಉತ್ಪತ್ತಿಗಳ ಮರು ಹರಾಜು

ಈ ವಿಭಾಗದ ಅರಣ್ಯದಿಂದ ಇಲಾಖಾವತಿಯಿಂದ ಸಂಗ್ರಹಿಸಿದ ಕಿರುಉತ್ಪತ್ತಿಯನ್ನು ರಾಮಪತ್ರೆ, ಸೀಗೆ ಕಾಯಿ, ಧೂಪ, ಬೆತ್ತ ಇತ್ಯಾದಿಗಳನ್ನು ಲಾಟುಗಳಾಗಿ ಈ ಕೆಳಗೆ ಕಾಣಿಸಿದ ಅರಣ್ಯ ವಲಯದಲ್ಲಿ ಆದರ ಎದುರುಗಡೆಯಲ್ಲಿ ನಮೂದಿಸಿದ ದಿನಾಂಕ ಹಾಗೂ ಸಮಯದಲ್ಲಿ ಬಹಿರಂಗವಾಗಿ ಹರಾಜು ಮಾಡಲಾಗುವುದು.

1. ಅರಣ್ಯ ವಲಯಾಧಿಕಾರಿಯವರ ಕಛೇರಿ, ಮಂಗಳೂರು ಹರಾಜು ದಿ: 31-3-86ರ ಬೆಳಗ್ಗೆ 11 ಗಂಟೆಗೆ ರಾಮಪತ್ರೆ-3300 ಕಿ. ಜಿ. (8 ಲಾಟು) ಬೆತ್ತ-1625, ಸಂಖ್ಯೆ (ಒಂದು ಲಾಟು).

2. ಅರಣ್ಯ ವಲಯಾಧಿಕಾರಿಯವರ ಕಛೇರಿ, ಸುಬ್ರಹ್ಮಣ್ಯ - ಹರಾಜು ದಿ: 4-4-86ರ ಮಧ್ಯಾಹ್ನ 1-00 ಗಂಟೆಗೆ ರಾಮಪತ್ರೆ-1290 ಕಿ. ಜಿ: ಸೀಗೆ ಕಾಯಿ-6000 ಕಿ. ಜಿ: ಧೂಪ-1327 ಕಿ. ಜಿ: ಅಂಟುವಾಳ-250 ಕಿ. ಜಿ. ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಪಡೆಯಬಹುದು.

ವಾ. ಪ್ರ. ಇ. 4960

ಬರ ಸಮಸ್ಯೆ ಬಗ್ಗೆ ಎಪ್ರಿಲ್ 18ರಿಂದ ಸಮುದಾಯ ಜಾಥಾ

ಸುರತ್ಕಲ್, ಮಾ. 25- ಬರ ನಿವಾರಣೆ ಬಗ್ಗೆ ಸರ್ಕಾರದ ಹಾಗೂ ಜನರ ಗಮನ ಸೆಳೆಯಲು ರಾಜ್ಯ 'ಸಮುದಾಯ' ತಂಡದ ನೇತೃತ್ವದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಜಾಥಾವು ಎಪ್ರಿಲ್ 18ರಿಂದ ಕುಂದಾಪುರದಿಂದ ಬೆಂಗಳೂರಿಗೆ ತೆರಳಲಿದೆ.

ಇದರ ಪೂರ್ವಭಾವಿಯಾಗಿ ಎ. 12ರಿಂದ 16ರವರೆಗೆ ಬರದ ಕುರಿತು ಕುಂದಾಪುರದಲ್ಲಿ ಕಾರ್ಯ ಶಿಬಿರವೊಂದು ನಡೆಯಲಿದೆ ಎಂದು ತಿಳಿದು ಬಂದಿದೆ.

ಅಬಕಾರಿ ರಕ್ಷಕರ ಮುಷ್ಕರ ಬೆದರಿಕೆ

ಮಂಗಳೂರು, ಮಾ. 25- ಮಾರ್ಚ್ ತಿಂಗಳ ಅಂತ್ಯದೊಳಗೆ ತಮ್ಮ ವೇತನ ಪರಿಷ್ಕರಿಸದಿದ್ದಲ್ಲಿ ರಾಜ್ಯಾದ್ಯಂತ ಮುಷ್ಕರ ನಡೆಸುವುದಾಗಿ ಕರ್ನಾಟಕ ರಾಜ್ಯ ಅಬಕಾರಿ ರಕ್ಷಕರ ಸಂಘ ಹೇಳಿದೆ.

ಇತ್ತೀಚೆಗೆ ಸಂಘ ಚೆನ್ನಗಂಗಯ್ಯ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಈ ತೀರ್ಮಾನ ಕೈಗೊಂಡಿತು.

ಅರಣ್ಯ ರಕ್ಷಕರಿಗೆ ನೀಡಿದಂತೆ ಪರಿಷ್ಕೃತ ವೇತನವನ್ನು ತಮಗೂ ನೀಡುವಂತೆ ಒತ್ತಾಯಿಸಿರುವ ಸಂಘ ಈ ಬಗ್ಗೆ ಮಾ. 17 ರಂದು ಅಬಕಾರಿ ಆಯುಕ್ತರಿಗೆ ಖುದ್ದಾಗಿ ಮನವಿ ಸಲ್ಲಿಸಿದೆ.

ಈ ಸಭೆಗೆ ರಾಜ್ಯದ ಎಲ್ಲ ಜಿಲ್ಲೆಗಳ ಅಬಕಾರಿ ರಕ್ಷಕರ ಸಂಘದ ಅಧ್ಯಕ್ಷರು, ಕಾರ್ಯದರ್ಶಿಗಳು ಭಾಗವಹಿಸಿದ್ದರು. ಮುಖ್ಯ ಅತಿಥಿಯಾಗಿ ದ. ಕ. ಜಿಲ್ಲಾ ಅಬಕಾರಿ ರಕ್ಷಕರ ಸಂಘದ ಅಧ್ಯಕ್ಷ ಕೆ. ರಾಮಕೃಷ್ಣ ಅವರು ಭಾಗವಹಿಸಿದ್ದರು.

ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರಕಾರದ ಅಧೀನ ಸಂಸ್ಥೆ)

ಹೊಯ್ಗೆ ಬಜಾರ್, ಮಂಗಳೂರು-575 001

ದೂರವಾಣಿ: 21281, 21282, 21283.

ಸಂಕ್ಷಿಪ್ತ ಟೆಂಡರು ಅಧಿಸೂಚನೆ

ಈ ಕೆಳಗೆ ಕಾಣಿಸಿರುವ ಬೋಟ್ ಬಿಲ್ಡಿಂಗ್ ಯಾರ್ಡ್‌ನ ವಿದೇಶಿ ನಿರ್ಮಿತ ಉತ್ತಮ ಸ್ಥಿತಿಯಲ್ಲಿರುವ ಯಂತ್ರಗಳು ಹಾಗೂ ಇತರ ಸಲಕರಣೆಗಳನ್ನು ವಿಲೇವಾರಿಸುವ ಬಗ್ಗೆ ಆಸಕ್ತ ವ್ಯಕ್ತಿಗಳಿಂದ ಮೊಹರಾದ ಟೆಂಡರುಗಳನ್ನು 11-4-86 ಮಧ್ಯಾಹ್ನ 2-15ರ ಒಳಗೆ ಪಡೆಯಲಾಗುವುದು.

1) ಥಿಕ್‌ನೆಸ್ ಪ್ಲೇನರ್
2) ಸರ್‌ಫೇಸ್ ಪ್ಲೇನರ್
3) ಸರ್‌ಕ್ಯುಲರ್ ಸಾ
4) ಬ್ಯಾಂಡ್ ಸಾ
5) ಮರಕೆಲಸದ ಗರಗಸ, ಕ್ಲೇಂಪ್ಸ್, ಆಗರ್ಸ್ ಇತ್ಯಾದಿ
6) ವರ್ಕ್‌ಶೋಪಿನ ಫೈಲ್ಸ್, ಸ್ಕ್ರೂಡ್ರೈವರ್ಸ್, ಸರ್‌ಕ್ಲಿಪ್ ಪ್ಲೇಯರ್ಸ್, ರೀಮರ್ಸ್, ಮೈಕ್ರೋಮೀಟರ್, ಸೋಕೆಟ್ ಸ್ಪಾನರ್ ಸೆಟ್, ಬೋರ್‌ರೆಂಚ್ ಇತ್ಯಾದಿ, ಇತ್ಯಾದಿ.

ಟೆಂಡರಿನಲ್ಲಿ ಪಾಲ್ಗೊಳ್ಳ ಬಯಸುವವರು ಕರ್ನಾಟಕಾ ಮೀನುಗಾರಿಕಾ ಅಭಿವೃದ್ಧಿ ನಿಗಮ, ನಿಯಮಿತ, ಮಂಗಳೂರು ಇವರ ಹೆಸರಿಗೆ ಪ್ರತಿ ಐಟಂಗೆ ರೂಪಾಯಿ 250.00ನ್ನು ಡಿ. ಡಿ. ರೂಪದಲ್ಲಿ ಮುಂಗಡ ಠೇವಣಿಯಾಗಿ ಪಾವತಿಸಿ ನಿಗದಿತ ಟೆಂಡರು ಫಾರ್ಮಿನಲ್ಲಿ ತಮಗೆ ಬೇಕಾದ ಯಂತ್ರಗಳಿಗೆ ತಮ್ಮ ಟೆಂಡರನ್ನು ಸಲ್ಲಿಸಬಹುದು. ಮೇಲ್ಕಾಣಿಸಿದ ಯಂತ್ರಗಳನ್ನು ಅಥವಾ ಸಲಕರಣೆಗಳನ್ನು ಪರೀಕ್ಷಿಸಬೇಕೆಂದು ಇಚ್ಛಿಸುವವರು ಕಚೇರಿ ಸಮಯದಲ್ಲಿ ಬೆಳಗ್ಗೆ 10-00ರಿಂದ ಸಂಜೆ 5-30ರ ವರೆಗೆ ಪರೀಕ್ಷಿಸಬಹುದು. ನಿರ್ದಿಷ್ಟ ಟೆಂಡರು ಫಾರ್ಮುಗಳನ್ನು ಮತ್ತು ಟೆಂಡರಿನ ಷರತ್ತುಗಳನ್ನು ಮೇಲಿನ ಕಚೇರಿಯಿಂದ ಪಡೆಯಬಹುದು.

ಸಹಿ/- ಬಿ. ಚಂದ್ರಶೇಖರ್,
ವ್ಯವಸ್ಥಾಪಕ ನಿರ್ದೇಶಕರು.

OBITUARY

REV. FR. A. J. TELLIS EXPIRED TUESDAY AT 6-10 A.M. IN MANGALORE. FUNERAL WILL TAKE PLACE IN MILAGRES CHURCH KALLIANPUR TODAY WEDNESDAY 26th MARCH 86 AT 8A.M.

JAYARAM PADIYAR
OLD STUDENT
MILAGRES HIGH SCHOOL KALLIANPUR

ಸುರೇಂದ್ರನ ಜೀವನ ಕಥನ - 10

ಬೆಂಬಿಡದ ಪೊಲೀಸರು: ನೆಲೆಸಿಗದ ಸುರೇಂದ್ರ

ಒಂದು ದಿನ ರಾತ್ರಿ ಲಾಕಪ್ಪಿನಿಂದ ಹೊರಬಂದು ಓಡತೊಡಗಿದ. ಪೊಲೀಸರು ಬೆನ್ನಟ್ಟಿದರು. ಆಗ ಶಿವಮೊಗ್ಗದಲ್ಲಿ ಕೋಮು ಗಲಭೆ ನಡೆಯುತ್ತಿತ್ತು. ಸುರೇಂದ್ರ ನೇರವಾಗಿ ನದಿಗೆ ಹಾರಿದ. ಕೈ ಕೋಳಕ್ಕೆ ಬೀಗ ಸರಿಯಾಗಿ ಹಾಕದೇ ಇದ್ದುದರಿಂದ ಇನ್ನು ಒಳ್ಳೆಯದಾಯಿತು. ಮತ್ತೆ ಎಲ್ಲೆಲ್ಲೋ ಹೋಗಿ ತಿಮ್ಮನ ಮನೆಗೆ ಬಂದು ಸೇರಿದ.

ಆದರೆ ಅಲ್ಲಿ ತಿಮ್ಮ ಇರಲಿಲ್ಲ. ಆತ ಯಾವುದೋ ಕೆಲಸದ ನಿಮಿತ್ತ ಬೆಂಗಳೂರಿಗೆ ಹೋಗಿದ್ದ. ತಿಮ್ಮನ ಹೆಂಡತಿ ಇದ್ದಳು. ಅಲ್ಲಿ ಬೇರೆ ಬಟ್ಟೆ ಹಾಕಿಕೊಂಡ. ಸುರೇಂದ್ರ ತಿಮ್ಮನ ಹೆಂಡತಿಯ ಹತ್ತಿರ ಸ್ವಲ್ಪ ಹಣವನ್ನು ಪಡೆದುಕೊಂಡು ಬೆಳಗಾವಿಗೆ ಹೋದ.

ಅಲ್ಲಿ ಬೇಬಿಯ ಪತ್ತೆ ಇರಲಿಲ್ಲ. ತನ್ನ ಪ್ರೇಯಸಿಯನ್ನು ಯಾರಾದರೂ ಅಪಹರಿಸಿಕೊಂಡು ಹೋದರೆ? ಆಕೆ ಎಲ್ಲಾದರೂ ಆತ್ಮಹತ್ಯೆ ಮಾಡಿಕೊಂಡಳೇ? ಎಂದು ಚಿಂತೆಯಲ್ಲಿ ಬಿದ್ದ.

ಗಂಡನನ್ನು ಜೈಲಿನಿಂದ ಬಿಡಿಸುವ ಯತ್ನದಲ್ಲಿ ತೊಡಗಿದ್ದ ಬೇಬಿ ನೀಲೇಶ್ವರಕ್ಕೆ ಹೋಗಿ ಸ್ವಲ್ಪ ಹಣ ಪಡೆಕೊಂಡು ತಿರುಗಿ ಬಂದಳು. ಆದರೆ ಅಷ್ಟರೊಳಗೆ ಸುರೇಂದ್ರ ಜೈಲಿನಿಂದ ಪರಾರಿಯಾದ ಸಂಗತಿ ಮರುದಿನದಲ್ಲಿ ಹಬ್ಬಿತ್ತು. ಬೇಬಿ ಮತ್ತೆ ನೀಲೇಶ್ವರಕ್ಕೆ ಬಂದು ನೆಲೆ ನಿಂತಳು.

ನೀಲೇಶ್ವರದಲ್ಲಿ ವಾಸ ಹೂಡಿದ ಸುರೇಂದ್ರನನ್ನು ಅಲ್ಲಿನ ಪೊಲೀಸರು ಹಿಡಿದು ಹೊಂಚು ಹಾಕಿದರು. ಒಂದೆರಡು ಬಾರಿ ಹಿಡಿದು ಲಾಕಪ್ಪಿಗೆ ಹಾಕಿದ್ದೂ ಉಂಟು. ಆದರೆ ಅಲ್ಲಿಂದ ತಪ್ಪಿಸಿಕೊಂಡ ಮೇಲೆ ಪೊಲೀಸರು ಆತನನ್ನು ಹುಡುಕುತ್ತಲೇ ಇದ್ದರು.

ಸುರೇಂದ್ರನ ಮನೆಯ ಸುತ್ತ ಆಗಾಗ ಪೊಲೀಸರು ಕಾಣಿಸಿಕೊಳ್ಳಲಾರಂಭಿಸಿದರು. ಶಿವಮೊಗ್ಗದಲ್ಲಿ ಕಳ್ಳನೊಬ್ಬ ಜೈಲಿನಿಂದ ಪರಾರಿಯಾಗಿದ್ದಾನೆಂಬ ಸುದ್ದಿ ದಟ್ಟವಾಗಿ ಹರಡತೊಡಗಿದಾಗ ಸುರೇಂದ್ರ ಜಾಗಖಾಲಿ ಮಾಡುವ ಯೋಚನೆ ಮಾಡಿದ.

ಸುರೇಂದ್ರ ನೇರವಾಗಿ ಉಡುಪಿಗೆ ಬಂದ. ಅಲ್ಲಿಂದ ಕೆಮ್ಮಣ್ಣಿಗೆ ಹೋಗಿ ಅಕ್ಕನ ಮನೆಯಲ್ಲಿ ವಾಸ ಮಾಡತೊಡಗಿದ. "ಏನು ಕಥೆ? ನೀನು ಯಾಕೆ ಬಂದೆ. ಬೇಬಿ ಎಲ್ಲಿ?" ಎಂದು ಮನೆಯವರು ಕೇಳಿದರು. ಸುರೇಂದ್ರ ಮೌನ ತಾಳಿದ.

ಕೆಮ್ಮಣ್ಣಿನಲ್ಲಿ ಹಗಲು ನಿದ್ದೆ ಮಾಡಿ ರಾತ್ರಿ ಸಂಚಾರ ಪ್ರಾರಂಭಿಸಿದ ಸುರೇಂದ್ರ. ಈ ನಡುವೆ ಹಂದಿ ಸಾಕಲು ಮನಸ್ಸು ಮಾಡಿದ. ಅಕ್ಕನ ಮನೆಯ ಎದುರು ಕೆಲವು ಜನರು ಶಿವಮೊಗ್ಗದ ಕಳ್ಳ ಲಾಕಪ್ಪಿನಲ್ಲಿ ತಪ್ಪಿಸಿಕೊಂಡ ವಿಚಾರ ಮಾತನಾಡುತ್ತಿದ್ದಾಗ ಸುರೇಂದ್ರ, ಇಂಗು ತಿಂದ ಮಂಗನಂತೆ ತಲೆ ಅಲ್ಲಾಡಿಸಿದ.

ಸುರೇಂದ್ರ ಕೆಮ್ಮಣ್ಣಿನಲ್ಲಿರುವ ಸಂಗತಿ ತಿಳಿದ ಬೇಬಿ ಅಲ್ಲಿಗೆ ಬಂದು ಗಲಾಟೆ ಮಾಡಿದಳು. ಇನ್ನು ಇಲ್ಲಿರುವುದು ಒಳ್ಳೆಯದಲ್ಲ ಎಂದು ಭಾವಿಸಿದ. ಸುರೇಂದ್ರ, ನೇರವಾಗಿ ಗೋಪಾಲನ ಮನೆ ಸೇರಿದ. ಅಲ್ಲಿ ಹೆಂಡತಿಯ ಚಿನ್ನದ ಒಲೆಗಳನ್ನು ಮಾರಿ ಹಂದಿ ವ್ಯಾಪಾರ ಪ್ರಾರಂಭಿಸಿದ.

ಅಲ್ಲಿಗೂ ಪೊಲೀಸರು ಬರಬೇಕೆ? ಸುರೇಂದ್ರನಿಗೆ ಕನ್ನಡ ಬರುವುದಿಲ್ಲ ಎಂದು ಅವರು ಏನೇನೋ ಮಾತನಾಡಿದರು. "ಈತನನ್ನು ಮೊದು ಮಾತನಾಡಿ ಹಿಡಿಯಬೇಕು. ಆಗ ಹೆಚ್ಚಿನ ಸಂಗತಿ ಗೊತ್ತಾಗುತ್ತದೆ" ಎಂದು ಪೊಲೀಸರು ಮಾತನಾಡಿಕೊಂಡರು. ಇದೆಲ್ಲವನ್ನು ಸುರೇಂದ್ರ ಕೇಳಿಸಿಕೊಂಡ.

ಪೊಲೀಸರ ಕಣ್ಣು ತಪ್ಪಿಸಿ ಓಡಿಹೋದ ಸುರೇಂದ್ರ ಮಣಿಪಾಲದಲ್ಲಿ ಬಾವಿಗೆ ಹಾರಿ ತಪ್ಪಿಸಿಕೊಂಡ. ಮಣಿಪಾಲದ ಕಾಡಿನಲ್ಲಿ ರಾತ್ರಿ ಕಳೆದ. ಮರುದಿನ ಬೆಳಗ್ಗೆ ಮಣಿಪಾಲಕ್ಕೆ ಬಂದ. ಮತ್ತೆ ಅಲ್ಲಿದ್ದರೆ ಅಪಾಯ ಎಂದರಿತು ಪೇತ್ರಿಗೆ ಹೊರಟ. ಜೊತೆಗೆ ಹೆಂಡತಿ ಮಕ್ಕಳೂ ಇದ್ದರು.

ಪೇತ್ರಿಯಲ್ಲೂ ಸುರೇಂದ್ರನಿಗೆ ಸ್ವಾಗತ ಸಿಕ್ಕಲಿಲ್ಲ. ಹರಿಜನ ಚೆಕ್ಕ ಬಾಯಿಗೆ ಬಂದಂತೆ ಬೈದ. ಕೆಲವು ದಿನ ಪೇತ್ರಿಯ ಕಾಡಿನಲ್ಲಿ ಹೆಂಡತಿ ಮಕ್ಕಳ ಜೊತೆ ಅರಣ್ಯವಾಸ.

ಮಣಿಪಾಲದಲ್ಲಿ ಪೊಲೀಸರ ಕೈಯಿಂದ ತಪ್ಪಿಸಿಕೊಳ್ಳಲು ಬಾವಿಗೆ ಹಾರಿದ್ದರಿಂದ ಸುರೇಂದ್ರನ ಕೈಕಾಲು, ಬೆನ್ನಲ್ಲಿ ಗಾಯವಾಗಿತ್ತು. ನಡೆಯಲು ಕಷ್ಟವಾಗಿತ್ತು.

ಕೋಟದ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆಕೊಂಡ. ಮತ್ತೆ ನೇರವಾಗಿ ಕುಂದಾಪುರ ಸರಕಾರಿ ಆಸ್ಪತ್ರೆಗೆ ಹೋದ. ಅಲ್ಲಿ ಕೆಲವು ದಿನ ನಿಲ್ಲಬೇಕೆಂದು ವೈದ್ಯರು ಸಲಹೆ ಮಾಡಿದರು. ಸುರೇಂದ್ರ ಹಾಗೇ ಮಾಡಿದ. ಅಲ್ಲೂ ಗುಣವಾಗಲಿಲ್ಲ. ಮತ್ತೆ ಕುಂದಾಪುರ ಖಾಸಗಿ ನರ್ಸಿಂಗ್ ಹೋಮ್‌ನಲ್ಲಿ ಚಿಕಿತ್ಸೆ ಪಡೆಕೊಂಡ. ಸುರೇಂದ್ರ ಹೆಂಡತಿ ಮಕ್ಕಳೊಂದಿಗೆ ಹುಬ್ಬಳ್ಳಿಗೆ ಹೊರಟ.

ಹುಬ್ಬಳ್ಳಿಯಲ್ಲಿ ಏನೂ ಕೆಲಸ ಸಿಗಲಿಲ್ಲ. ಯಾರೋ ಒಬ್ಬರ ಸಲಹೆಯಂತೆ ಕೆಲಸ ಅರಸಿಕೊಂಡು ಬಾದಾಮಿಗೆ ಹೊರಟ. ಅಲ್ಲಿ ಬಾಡಿಗೆ ಮನೆಯೊಂದರಲ್ಲಿ ಸುರೇಂದ್ರ ಮತ್ತವನ ಹೆಂಡತಿಯ ವಾಸ. ಸುರೇಂದ್ರನ ಕೈಕಾಲಿನ ಗಾಯ ಇನ್ನೂ ಗುಣವಾಗಿರಲಿಲ್ಲ. ಬಾದಾಮಿಯಲ್ಲೂ ಚಿಕಿತ್ಸೆಯನ್ನು ಮುಂದುವರಿಸಿದ.

ಹೆಚ್ಚು ಕಡಿಮೆ ಏಳು ತಿಂಗಳು ಸುರೇಂದ್ರ ಬಾದಾಮಿಯಲ್ಲಿದ್ದ. ಅಲ್ಲೂ ಯಾವ ಕೆಲಸ ಸಿಕ್ಕಲಿಲ್ಲ. ಆದರೆ ಅಲ್ಲಿ ರಾತ್ರಿ ವೇಳೆ ಸಾಧ್ಯವಾದಷ್ಟು ಕಳ್ಳತನ ಮಾಡಿ ಹಣ ಸಂಪಾದಿಸುತ್ತಿದ್ದ. ಹೀಗಾಗಿಯೇ ಇವನ ಜೀವನ ರಥ ಇಲ್ಲೂ ಸಲೀಸಾಗಿ, ಓಂದಿನಂತೆಯೇ ಸೊಗಸಾಗಿ ಸಾಗತೊಡಗಿತು.

ಇಲ್ಲೂ ಸುರೇಂದ್ರನಿಗೆ ಇನ್ನೊಂದು ಆಶ್ಚರ್ಯ ಕಾದಿತ್ತು. ಶಿವಮೊಗ್ಗದಲ್ಲಿ ಲಾಕಪ್ಪಿನಿಂದ ತಪ್ಪಿಸಿಕೊಂಡ ಕಥೆಯನ್ನು ಇಲ್ಲಿನ ಜನ ಆತನೊಂದಿಗೆ ಹೇಳಿದಾಗ ಆತ "ಹೌದು ಹೌದು" ಎಂದಷ್ಟೇ ಉತ್ತರಿಸಿ, ಮನಸ್ಸಿನೊಳಗೆ "ನಾನೆಂತಹ ವೀರ" ಎಂದು ಉಬ್ಬಿದ.

ಇಂದಿನ ಕಾರ್ಯಕ್ರಮ

ಸೋಮೇಶ್ವರ

ರಾತ್ರಿ 9.30ಕ್ಕೆ ಸೋಮೇಶ್ವರ ಉಚ್ಚಿಲ ಜುಮ್ಮಾ ಮಸೀದಿಯಲ್ಲಿ ಉರೂಸು ಪ್ರವಚನ : ಮೊಹಿಯುದ್ದೀನ್ ಮೌಲವಿ ಎಂ.ಎಫ್.ಬಿ. ಅಂಜೋಣ ಅವರಿಂದ.

ಕಕ್ಕುಂಜೆ

ಪಂಚದುರ್ಗಾ ಪರಮೇಶ್ವರಿ ದೇವಾಲಯದ ಬ್ರಹ್ಮಕಲಶೋತ್ಸವದ ಅಂಗವಾಗಿ ಸಂಜೆ 5.30ಕ್ಕೆ ಸಭಾ ಕಾರ್ಯಕ್ರಮ. ನಂತರ ಹರಿಕಥೆ : ಭದ್ರಗಿರಿ ಅಚ್ಯುತದಾಸ್.

ಕುಂದಾಪುರ

ಮೀನುಮಾರ್ಕೆಟ್ ರಸ್ತೆ ನಾಗಬೊಬ್ಬರ್ಯ ದೇವಸ್ಥಾನದ 4ನೇ ವರ್ಧಂತ್ಯುತ್ಸವ.

ಮುಲುಜಂಗಾಲ್

ಬೆಳಗ್ಗೆ 8 ಗಂಟೆಗೆ ಪಾರ್ಥಸಾರಥಿ ಕೃಷ್ಣ ದೇವಾಲಯ ಜೀರ್ಣೋದ್ಧಾರಕ್ಕಾಗಿ ಅಷ್ಟಮಂಗಲ ಪ್ರಶ್ನೆ. ಬಲಿವಾಡು ಕೂಟ.

ತದಡಿ

ಮೀನುಗಾರರ ಸಹಕಾರಿ ಸಂಘದ ವತಿಯಿಂದ ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗದ 359ನೇ ವ್ಯಾಸಂಗ ವಿಸ್ತರಣ ಉಪನ್ಯಾಸ ಶಿಬಿರ.

ಮಡಿಕೇರಿ

ಸಂಜೆ 6.30ರಿಂದ, ಕನ್ನಡ ಸಂಸ್ಕೃತಿ ಇಲಾಖೆ ಹಾಗೂ ಲೇಖಕ ಮತ್ತು ಕಲಾವಿದರ ಬಳಗ ವತಿಯಿಂದ, ಪುರಸಭೆ ರಂಗ ಮಂದಿರದಲ್ಲಿ ನಾಟಕೋತ್ಸವ.

ದಿಲ್ಲಿ ದೂರದರ್ಶನ

26-3-86 (ಬುಧವಾರ)

ಸಂಜೆ 6-00ಕ್ಕೆ ಆರಂಭಿಕ ಪ್ರಕಟಣೆಗಳು, 6-15 'ಸರ್‌ಕಸ್ ದುನಿಯಾ' - ಮಕ್ಕಳಿಗಾಗಿ ಹಿಂದಿ ಕಾರ್ಯಕ್ರಮ (ಹೋಲಿ ಆಯಿ), 6-35 ಮಹಿಳೆಯರಿಗಾಗಿ ಕಾರ್ಯಕ್ರಮ, 6-55 ಕಾರ್ಯಕ್ರಮ ವಿಶೇಷಗಳು; ಕಾಣೆಯಾದವರ ಬಗ್ಗೆ ಮಾಹಿತಿಗಳು, 7-00 ಕೃಷಿದರ್ಶನ, 7-40 "ಅಪ್ ಔರ್ ಹಮ್" (ಧಾರಾವಾಹಿ), 8-00 ಚಿತ್ರಹಾರ್, 8-40 ಹಿಂದಿ ವಾರ್ತೆ, 9-00 'ಖಾಂದಾನ್' (ಹಿಂದಿ ಸರಣಿ ಚಿತ್ರ), 9-30 ಇಂಗ್ಲಿಷ್ ವಾರ್ತೆ, 9-50 'ಬ್ರಿಡ್ಜ್ ಶೋ' ವಿಶೇಷ ಕಾರ್ಯಕ್ರಮ, 10-10 ಹಾಸ್ಯಕವಿ ಸಮ್ಮೇಳನ, 11-25 ಪ್ರಮುಖ ಸುದ್ದಿಗಳು.